# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಅಶ್ವಿನಿ ವಿಜಯ

ಕವಿ

## ಇಟಗಿ ಮಹಾಬಲೇಶ್ವರ ಭಟ್ಟ

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠೆ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್.ಶಿವರುದ್ರಪ್ಪ .ಎಚ್ .**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ.ಎಸ್ .**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ  ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಜೈಮಿನಿ ಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಗೊತ್ತಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೪೦೫ + ೩ ಬದಲಿ ಪದ್ಯಗಳು (೨೨೮, ೩೦೨, ೩೯೮)

ಪ್ರಾರಂಭ: ೮ ಪದ್ಯಗಳು – ಪದ್ಯ ೧ - ೮

ಸಂಧಿ ೧: ಅಶ್ವಿನೀಪ್ರಾದುರ್ಭಾವ: ೧೦೫ ಪದ್ಯಗಳು : ಪದ್ಯ ೯ – ೧೧೫

ಸಂಧಿ ೨: ಹವಿರ್ವಾಗ್ದಾನ (ದಕ್ಷಯಜ್ಞ): ೧೧೭ ಪದ್ಯಗಳು: ಪದ್ಯ ೧೧೬ – ೨೩೩

ಸಂಧಿ ೩: ಹವಿರ್ಮಾನ್ಯತೆ (ಸತಿಸುಕನ್ಯಾ): ೭೫ ಪದ್ಯಗಳು: ಪದ್ಯ ೨೩೪ – ೩೦೯

ಸಂಧಿ ೪: ಅಶ್ವಿನ್ಯನುಗ್ರಹ (ವೀರವನಿತೆ ವಿಶ್ಪಲೆ): ೯೯ ಪದ್ಯಗಳು : ಪದ್ಯ ೩೧೦ - ೪೦೮

**ಪಾತ್ರಗಳು:**

ಅಶ್ವಿನೀಪ್ರಾದುರ್ಭಾವ: ವಿಶ್ವಕರ್ಮ (ತ್ವಷ್ಟ್ರ), ಸಂಜ್ಞೆ (ಛಾಯೆ), ಬಾಲಯಮ, ಸೂರ್ಯ, ಅಶ್ವಿನಿಯರು (ದಸ್ರ-ನಾಸತ್ಯ), ಬ್ರಹ್ಮ, ದಧ್ಯಂಚ, ದೇವೇಂದ್ರ, ನಾರದ

ಹವಿರ್ವಾಗ್ದಾನ (ದಕ್ಷಯಜ್ಞ): ಈಶ್ವರ, ದಕ್ಷ, ಬ್ರಾಹ್ಮಣರು, ದಾಕ್ಷಾಯಿಣಿ, ವೀರಭದ್ರ, ವಿಷ್ಣು

ಹವಿರ್ಮಾನ್ಯತೆ (ಸತಿಸುಕನ್ಯಾ): ಚ್ಯವನ, ಸುಕನ್ಯಾ, ಶರ್ಯಾತಿ, ವಶಿಷ್ಠ, ಬೃಹಸ್ಪತಿ

ಅಶ್ವಿನ್ಯನುಗ್ರಹ (ವೀರವನಿತೆವಿಶ್ಪಲೆ): ಫಣಿ ದನುಜ, ಶತಾಸುರ, ಮತಾಸುರ, ಗೋಪಾಲಕರು, ಐಳ ಚಕ್ರವರ್ತಿ, ವಿಶ್ಪಲೆ, ಅಗಸ್ತ್ಯ

**ಕಥಾ ಸಾರಾಂಶ:**

**ಅಶ್ವಿನೀಪ್ರಾದುರ್ಭಾವ:**

ದೇವಶಿಲ್ಪಿಯಾದ ವಿಶ್ವಕರ್ಮನ ಪ್ರವೇಶ, ಅವನ ಮಗಳು ಸಂಜ್ಞೆಯು ಪತಿಯಾದ ಸೂರ್ಯನ ಶಾಖವನ್ನು ತಡೆಯಲಾರದೆ, ತನ್ನ ನೆರಳಿಗೆ ಆಕಾರವನ್ನು ಕೊಟ್ಟು ಛಾಯೆಯೆಂಬ ಹೆಸರನ್ನಿಟ್ಟು ತವರನ್ನು ಸೇರುತ್ತಾಳೆ. ವಿಶ್ವಕರ್ಮನು ಆಕೆಯನ್ನು ತಿರಸ್ಕರಿಸುತ್ತಾನೆ. ಅವಳು ಉತ್ತರ ಕುರುಕ್ಷೇತ್ರದಲ್ಲಿ ತಪಸ್ಸಿನಲ್ಲಿ ನಿರತಳಾಗುತ್ತಾಳೆ. ಕೆಲಕಾಲದ ನಂತರ ಛಾಯೆ ತನಗಾದ ಮಕ್ಕಳಿಗೆ ಹಾಗೂ ಸಂಜ್ಞೆಯ ಮಕ್ಕಳಲ್ಲಿ ತಾರತಮ್ಯ ತೋರುತ್ತಾಳೆ. ಬಾಲಯಮ ಇದನ್ನು ಪ್ರಶ್ನಿಸಿದಾಗ ಕಾಲ್ಗಳು ಕೊಳೆಯಲಿ ಎಂಬ ಶಾಪವನ್ನು ಕೊಡುತ್ತಾಳೆ. ತಂದೆಯಲ್ಲಾತ ದೂರುತ್ತಾನೆ. ಮಗನಿಗೆ ಸಾಂತ್ವನ ಪರಿಹಾರ ಹೇಳಿದ ಸೂರ್ಯ ಪತ್ನಿಯನ್ನು ಪ್ರಶ್ನಿಸುತ್ತಾನೆ. ಅವಳು ಸತ್ಯಹೇಳುತ್ತಾಳೆ. ವಿಶ್ವಕರ್ಮನಲ್ಲಿಗೆ ಬಂದ ಸೂರ್ಯ,  ಆಕ್ಷೇಪಿಸುತ್ತಾನೆ. ವಿಶ್ವಕರ್ಮನು ಘಟನೆಗಳನ್ನು ವಿವರಿಸಿ, ಮುಂದಿನ ಮಾರ್ಗೋಪಾಯವನ್ನು ಸೂಚಿಸುತ್ತಾನೆ. ಕುದುರೆಯ ರೂಪನ್ನು ತಾಳಿ ತಪಗೈವ ತನ್ನ ಸತಿಯನ್ನು ಸಂತೈಸಲು ಸೂರ್ಯನೂ ಅಶ್ವವಾಗಿ ಅವಳನ್ನು ಕೂಡುತ್ತಾನೆ. ಭಯಗೊಂಡ ಆಕೆ ತನ್ನೆರಡೂ ನಾಸಿಕಗಳಿಂದ ವೀರ್ಯವನ್ನು ಹೊರಹಾಕುತ್ತಾಳೆ. ಸುಂದರ ಅವಳಿ ಶಿಶುಗಳ ಜನನವಾಗುತ್ತದೆ. ಅವರೇ ಅಶ್ವಿನಿ ದೇವತೆಗಳು. ಸೂರ್ಯ-ಸಂಜ್ಞೆಯರು ತಮ್ಮ ಮಂಡಲಕ್ಕೆ ತೆರಳುತ್ತಾರೆ. ಬ್ರಹ್ಮನ ಅನುಗ್ರಹ ಪಡೆದ ಅಶ್ವಿನಿಯರು ಮಧುವಿದ್ಯೆ ಕಲಿಯಲು ದಧ್ಯಂಚ ಋಷಿಯಲ್ಲಿಗೆ ತೆರಳುತ್ತಾರೆ. ಪ್ರಪಂಚ ಜ್ಞಾನವಿಲ್ಲದೇ ಬ್ರಹ್ಮವಿದ್ಯೆ ಫಲಿಸದೆನ್ನುತ್ತಾನೆ. ಯಮಳರು ಪರ್ಯಟನೆಗೆ ತೆರಳುತ್ತಾರೆ. ದೇವೇಂದ್ರನಿಗೆ ಬ್ರಹ್ಮವಿದ್ಯೆ ಕಲಿಯುವಂತೆ ನಾರದರು ಪ್ರೇರೇಪಿಸುತ್ತಾರೆ. ದಧ್ಯಂಚ ಇಂದ್ರನ್ನು ಪರಿಹಾಸ ಮಾಡಿದಾಗ ಕ್ರುದ್ಧನಾದ ಇಂದ್ರ ಬೇರೆಯವರಿಗೂ ಬೋಧಿಸದಂತೆ ಅಂಥ ಸಂದರ್ಭದಲ್ಲಿ ತಲೆಕಡಿಯುತ್ತೇನೆಂದು ನಿರ್ಬಂಧ ಹೇರುತ್ತಾನೆ. ಜಗ ತಿರುಗಿ ಬಂದ ಅಶ್ವಿನಿಯರು ವಿಷಯ ತಿಳಿದು ಪರಿಹಾರವನ್ನೂ ಮಾಡುತ್ತಾರೆ. ಹಾಗೆ ಕುದುರೆಯ ಮುಖವಾಂತ ಋಷಿಯನ್ನು ಇಂದ್ರ ಸಿಟ್ಟಿನಿಂದ ತಲೆಗಡಿದು ತೆರಳುತ್ತಾನೆ. ಅಶ್ವಿನಿಯರು ಜೋಪಾನವಾಗಿಟ್ಟ ಮುನಿಯ ನಿಜಶಿರವನ್ನು ಜೋಡಿಸುತ್ತಾರೆ. ಹೀಗೆ ವಿದ್ಯೆಯನ್ನು ಸಂಪಾದಿಸಿ ಲೋಕಸೇವೆಯಲ್ಲಿ ತೊಡಗಿತ್ತಾರೆ.

**ಹವಿರ್ವಾಗ್ದಾನ:**

ಯಜ್ಞದಲ್ಲಿ ದಕ್ಷನಿಗೆ ಆಡಿನ ಶಿರವನ್ನು ಜೋಡಿಸುವ ಕಾಲಕ್ಕೆ ದೇವೇಂದ್ರನಿಂದ ತನ್ನ ಸಮ ಹವಿಸ್ಸು ಸಿಗುವಂತೆ ಮಾಡುತ್ತೇನೆಂದು ವಾಗ್ದಾನವಾಗುತ್ತದೆ.

**ಹವಿರ್ಮಾನ್ಯತೆ:**

ಋಷಿವರ ಚ್ಯವನನ ಸತಿ ಸುಕನ್ಯೆಯನ್ನು ಕೆಣಕಿದ ಅಶ್ವಿನಿಯರು, ತಾವೊಲಿದು ಚ್ಯವನನಿಗೆ ರೂಪ-ಯೌವನವನ್ನು ಕೊಡುತ್ತಾರೆ. ಪ್ರತಿಯಾಗಿ ಋಷಿಯು ಹವಿಸ್ಸನ್ನು ನೀಡುತ್ತೇನೆನ್ನುತ್ತಾನೆ. ಮಾವನಾದ ಶರ್ಯಾತಿ ರಾಜನ ಪುತ್ರಕಾಮೇಷ್ಠಿಯ ಸಂದರ್ಭದಲ್ಲಿ

ಹವಿರ್ಭಾಗವೀಯುತ್ತಾನೆ. ತಡೆದ ಮಹೇಂದ್ರನ ಕೈ ಸ್ತಬ್ಧಗೊಳಿಸುತ್ತಾನೆ. ದೇವಗುರು ಬೃಹಸ್ಪತಿಗಳು ಸಂಧಾನ ನಡೆಸಿ ಹವಿಸ್ಸು ಸಿಗುವಂತಾಗುತ್ತದೆ.

**ಅಶ್ವಿನ್ಯನುಗ್ರಹ:**

ಖೇಲವೆಂಬ ರಾಜ್ಯದ ದೊರೆ ಖಳನೆಂಬವನ ಮೇಲೆ ಫಣಿದನುಜ ಧಾಳಿಮಾಡಿ ದನಗಳನ್ನು ಹಿಡಿಯುತ್ತಾನೆ. ತಡೆಯ ಬಂದ ಸೇನಾನಾಯಕಿಯ ಕಾಲುಗಳನ್ನು ಮೋಸದಿಂದ ಕಡಿಯುತ್ತಾನೆ. ಪುರೋಹಿತರಾದ ಅಗಸ್ತ್ಯಮುನಿಯು ತಪಸ್ಸಿನಿಂದ ಅಶ್ವಿನಿಯರನ್ನು ಒಲಿಸಿಕೊಳ್ಳುತ್ತಾರೆ. ಅವರು ಆಕೆಗೆ ಉಕ್ಕಿನ ಕಾಲ್ಗಳನ್ನು ಜೋಡಿಸುತ್ತಾರೆ. ರಾಕ್ಷಸ ಸಮೂಹವನ್ನು ಆಕೆ ಸದೆಬಡಿಯುತ್ತಾಳೆ. ಹಣಕ್ಕಾಗಿಯೋ ಇತರ ಆಮಿಷಗಳಿಗೊಳಗಾಗಿಯೋ ವೈದ್ಯವನ್ನು ನಡೆಸಬಾರದೆಂಬ ಸಂದೇಶವನ್ನು ಅಶ್ವಿನಿಯರು ನೀಡುತ್ತಾರೆ. ಇಲ್ಲಿಗೆ ಮಂಗಳವಾಗುತ್ತದೆ.

**ಕವಿ ಪರಿಚಯ :**

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಇಟಗಿಯವರಾದ ಮಹಾಬಲೇಶ್ವರ ಭಟ್ಟರು ೧-೬-೧೯೬೮ ರಂದು ಜನಿಸಿದವರು. ಕೃಷಿಕ. ಯಕ್ಷಗಾನ ಕಲಾವಿದ. ಇಟಗಿಯ 'ಕಲಾ ಭಾಸ್ಕರ' ಸಾಂಸ್ಕೃತಿಕ ಸಂಘದ ಅಧ್ಯಕ್ಷ. ತಂದೆ ರಾಮಕೃಷ್ಣಭಟ್ಟ, ತಾಯಿ ಸರಸ್ವತಿ.

ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ “ಇಟಗಿ” ಎಂಬ ಪುಟ್ಟ ಗ್ರಾಮದಲ್ಲಿ ವೇ|ಮೂ|ಶ್ರೀ ರಾಮಕೃಷ್ಣ ಭಟ್ಟ ಹಾಗೂ ಶ್ರೀಮತಿ ಸರಸ್ವತಿ ದಂಪತಿಗಳ ನಾಲ್ಕನೇ ಮಗನಾಗಿ ದಿನಾಂಕ: ೦೧-೦೬-೧೯೬೮ ರಂದು ಹುಟ್ಟಿದರು. ಪತ್ನಿ ಮೈತ್ರಿ ಹಾಗೂ ಮಕ್ಕಳಾದ ಕುಮಾರ ವಿಧಾತ, ಕುಮಾರಿ ಐಸಿರಿಯರೊಂದಿಗಿನ ಸುಂದರ ಬದುಕಿವರದು.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಇಟಗಿಯ ಸರಕಾರಿ ಶಾಲೆಗಳಲ್ಲಿ ಉತ್ತೀರ್ಣರಾದರು. ಸಾಗರದ ಲಾಲಬಹದ್ದೂರ ಶಾಸ್ತ್ರಿ ಕಾಲೇಜು ಹಾಗೂ ಸಿದ್ದಾಪುರದ ಮಹಾತ್ಮಾ ಗಾಂಧಿ ಕಾಲೇಜುಗಳಲ್ಲಿ ಎರಡು ವರ್ಷದ ಪಿ.ಯೂ.ಸಿ.ಯನ್ನು ಮುಗಿಸಿದರು. ನಂತರ ದಕ್ಷಿಣಕನ್ನಡ ಜಿಲ್ಲೆಯ ಖಾಸಗೀ ಕಂಪನಿಗಳಲ್ಲಿ ನಾಲ್ಕು ವರ್ಷಗಳ ಕಾಲ ವಿವಿಧ ಕೆಲಸಗಳನ್ನು ಮಾಡಿದರು.

ಯಕ್ಷಗಾನ ಶಿಕ್ಷಣವನ್ನು ಪಡೆಯುವ ಉದ್ದೇಶದಿಂದ ಸನ್ ೧೯೯೦ರಲ್ಲಿ ಧರ್ಮಸ್ಥಳದ ಲಲಿತಕಲಾ ಕೇಂದ್ರಕ್ಕೆ ಸೇರ್ಪಡೆಯಾದರು. ನಿರಂತರ ಆರು ತಿಂಗಳುಗಳ ಕಾಲ ಅಲ್ಲಿಯೇ ಇದ್ದು ತೆಂಕುತಿಟ್ಟು ಯಕ್ಷಗಾನವನ್ನು ಅಭ್ಯಾಸ ಮಾಡಿದರು. ಇವರ ಭಾಗ್ಯಕ್ಕೆ ಯಕ್ಷಗಾನದ ಸ್ತ್ರೀ ವೇಷಧಾರಿಯಾಗಿ ಜೀವಂತ ದಂತಕತೆಯೆನಿಸಿದ ಡಾ. ಕೋಳ್ಯೂರು ರಾಮಚಂದ್ರ ರಾವ್ ಗುರುಗಳಾಗಿ ದೊರೆತರು. ಶ್ರೀ ಕಟೀಲು ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದಲ್ಲಿ ಒಂದು ತಿರುಗಾಟವಾಯಿತು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಶ್ರೀ ಮಯ ಕಲಾಕೇಂದ್ರಕ್ಕೆ ಸೇರಿ ಅಲ್ಲಿ ಶ್ರೀ ಶಂಭು ಹೆಗಡೆ ಕೆರೆಮನೆ ಮತ್ತು ಶ್ರೀ ವೇಂಕಟರಮಣ ಗಾಣಿಗರು ಗುರುಗಳಿಂದ ಬಡಗಿನ ನಾಟ್ಯಾಭ್ಯಾಸವಾಯಿತು. ಒಂದು ವರ್ಷದ ಅವಧಿಯಲ್ಲಿ ಬಡಗುತಿಟ್ಟಿನ ಯಕ್ಷಗಾನ ಅಧ್ಯಯನ ನಡೆಯಿತು. ಆ ಮೇಲೆ ಶ್ರೀ ಮುಖ್ಯಪ್ರಾಣ ಲಕ್ಷ್ಮೀ ವೇಂಕಟೇಶ ಪ್ರಸಾದಿತ ಯಕ್ಷಗಾನ ಮಂಢಳಿಯಲ್ಲಿ ಎರಡು ವರ್ಷಗಳ ಕಾಲ ಸ್ತ್ರೀ ವೇಷಧಾರಿಯಾಗಿ ದುಡಿದರು. ಭಾಗವತ ಶ್ರೀ ಸುಬ್ರಾಯ ಹೆಗಡೆ ಕಪ್ಪೆಕೆರೆಯವರ ಶಿಷ್ಯರಾಗಿ ಪೌರಾಣಿಕ ಪಾತ್ರಗಳನ್ನು ನಿರ್ವಹಿಸುವ ತಂತ್ರಗಳನ್ನು ಕಲಿತರು. ನಂತರ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ, ಮಂದಾರ್ತಿಯಲ್ಲಿ ಮೂರು ವರ್ಷಗಳ ಕಾಲ ವಿವಿಧ ವೇಷಗಳನ್ನು ಮಾಡಿ ಜನರಂಜನೆಯನ್ನು ಮಾಡುವಲ್ಲಿ ಯಶಸ್ವಿಯಾದರು.

ತಮ್ಮ ಯಕ್ಷಗಾನ ಪ್ರಯಾಣವನ್ನು ಶ್ರೀ ಬ್ರಹ್ಮಲಿಂಗೇಶ್ವರ ಯಕ್ಷಗಾನ ಮಂಡಳಿ, ಮಾರಣಕಟ್ಟೆ, ಶ್ರೀ ಗುಂಡಬಾಳ ಮುಖ್ಯಪ್ರಾಣ ಲಕ್ಷ್ಮೀವೇಂಕಟೇಶ್ವರ ಯಕ್ಷಗಾನ ಮಂಡಳಿಗಳಲ್ಲಿ ಮುಂದುವರೆಸಿದರು. ಯಕ್ಷಗಾನ ಬದುಕಿನ ಸುವರ್ಣ ಸಮಯ. ಪ್ರದರ್ಶನಗಳಲ್ಲಿ ಸ್ತ್ರೀ ಹಾಗೂ ಪುರುಷ ವೇಷವನ್ನು ಮಾಡುವುದಲ್ಲದೇ ಹಲವು ಅಪರೂಪದ ಪೌರಾಣಿಕ ಯಕ್ಷಗಾನ ಪ್ರಸಂಗಗಳನ್ನು ರಂಗಕ್ಕೆ ಯೋಗ್ಯವಾಗುವ ಹಾಗೆ ವಿನ್ಯಾಸ ಗೊಳಿಸಿದರು. ಬಿಡುವಿನ ಸಮಯದಲ್ಲಿ ಹಲವು ವಿದ್ಯಾರ್ಥಿಗಳಿಗೆ ಯಕ್ಷಗಾನ ಪಾಠವನ್ನು ಮಾಡಿದರು ಇವರ ಗರಡಿಯಲ್ಲಿ ಪಳಗಿದವರು ಖ್ಯಾತ ಕಲಾವಿದರಾದ ದೇವಿಮಕ್ಕಿ ನಾಗರಾಜ ನಾಯ್ಕ ಹಾಗೂ ವಿನಯಕ ನಾಯ್ಕ ಹೆಬ್ಬೈಲು. ಕಲಿತ ಯಕ್ಷಗಾನವನ್ನು ಮುಂದಿನ ಪೀಳಿಗೆಗೆ ದಾಟಿಸುವಲ್ಲಿ ತಮ್ಮ ಶ್ರಮ ಸಾರ್ಥಕವಾಗಿದೆಯೆಂಬ ಧನ್ಯತೆ ಇವರಿಗಿದೆ.

ಸನ್ ೨೦೦೪ರಿಮದ ೨೦೧೬ರ ವರೆಗೆ ಕೊಂಡದಕುಳಿ ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನ, ಕುಂಭಾಷಿ ಕುಂದಾಪುರದ ಈ ಮೇಳದಲ್ಲಿ ಪಾತ್ರಧಾರಿಯಾಗಿ ಮುಂಬಯಿ, ಚೆನ್ನೈ, ಹೈದರಾಬಾದ್, ಪುಣೆ, ಪಣಜಿ, ಬೆಂಗಳೂರು ಹಾಗೂ ಸಿಂಗಾಪುರ ಮೊದಲಾದೆಡೆಗಳಲ್ಲಿ ಪ್ರದರ್ಶನವನ್ನು ನೀಡಿದ್ದಾರೆ.

ಹುಟ್ಟಿದೂರಾದ ಇಟಗಿಯನ್ನು ಕೇಂದ್ರವಾಗಿಟ್ಟುಕೊಂಡು ಸನ್ ೨೦೦೫ರಲ್ಲಿ “ಕಲಾಭಾಸ್ಕರ” ಎನ್ನುವ ಸಾಂಸ್ಕೃತಿಕ ಸಂಘವನ್ನು ಸಮಾನ ಮನಸ್ಕರೊಡಗೂಡಿ ಸ್ಥಾಪಿಸಿದರು. ವಿದ್ಯಾರ್ಥಿಗಳಿಗೆ ಯಕ್ಷಗಾನವನ್ನು ಕಲಿಸುವುದು, ವಿವಿಧ ಪೌರಾಣಿಕ ಯಕ್ಷಗಾನ ಪ್ರದರ್ಶನಗಳನ್ನು ಏರ್ಪಡಿಸುವುದು, ಪ್ರೇಕ್ಷಕರಿಗೂ ಕಲಾವಿದರಿಗೂ ಅನುಕೂಲವಾಗುವ ಹಾಗೆ ವಿಚಾರಸಂಕಿರಣಗಳನ್ನು ಏರ್ಪಡಿಸುವುದು ಮೊದಲಾದ ಕಾರ್ಯಸೂಚಿಯು ಈ ಕಲಾಭಾಸ್ಕರ ಸಂಸ್ಥೆಗಿದೆ. ಇದನ್ನು ಕಾರ್ಯ ರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ರಾಜ್ಯದ ಹಲವಾರು ಭಾಗಗಳಲ್ಲಿ ಉತ್ತಮ ಅಭಿರುಚಿಯ ಯಕ್ಷಗಾನ ಪ್ರದರ್ಶನಗಳನ್ನು ಕಲಾಭಾಸ್ಕರವು ನಡೆಸಿದೆ.

ಯಕ್ಷಗಾನ ಛಂದಸ್ಸನ್ನು ಶ್ರೀ ಕಂದಾವರ ರಘುರಾಮ ಶೆಟ್ಟಿಯವರಲ್ಲಿ ಅಧ್ಯಯನ ಮಾಡಿದ್ದಾರೆ. ಅಶ್ವಿನೀ ವಿಜಯ, ಮಾರಿಷಾ ಕಲ್ಯಾಣ, ಗುರುದಕ್ಷಿಣೆ, ಪ್ರೇತೋದ್ಧರಣ, ದಂಡಕಮೋಕ್ಷ, ಗೋ ಮಹಿಮೆ ಮುಂತಾದ ಸುಂದರ ಪೌರಾಣಿಕ ಪ್ರಸಂಗಗಳನ್ನು ರಚಿಸಿದ್ದಾರೆ. ಯಕ್ಷಗಾನ ಛಂದಸ್ಸಿಗೆ ಸಂಬಧಿಸಿ ವಿವಿಧ ಗೋಷ್ಠಿಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ.

ಕುಶ, ಲವ, ಸಾವಿತ್ರಿ, ಪ್ರಭಾವತಿ, ಶ್ರೀಕೃಷ್ಣ, ರಾಮ, ಅಭಿಮನ್ಯು, ಕೈಕೆ, ಲಕ್ಷ್ಮಣ, ದಾಕ್ಷಾಯಿಣಿ, ಮಾಯಾಶೂರ್ಪಣಕಿ, ಸೀತೆ, ಮಂಡೋದರಿ, ದೇವಯಾನಿ, ಶರ್ಮಿಷ್ಠೆ, ಈಶ್ವರ, ವಿಷ್ಣು, ಶ್ರೀದೇವಿ, ಮಾಲಿನಿ, ದ್ರೌಪದಿ, ಸುಭದ್ರೆ, ನಾರದ ಮೊದಲಾದ ಪಾತ್ರಗಳು ಇವರಿಗೆ ಕೀರ್ತಿಯನ್ನು ತಂದುಕೊಟ್ಟಿದೆ. ೨೨-೦೨-೨೦೧೨ ರಂದು ವಿದೇಶಯಾನವಾಗಿ ಸಿಂಗಾಪುರದಲ್ಲಿ ನಡೆದ ಪ್ರದರ್ಶನದಲ್ಲಿ ವೇಷವನ್ನು ಮಾಡಿದ್ದಾರೆ.

ಯಕ್ಷಗಾನದ ಬಣ್ಣಗಾರಿಕೆ (ಮುಖವರ್ಣಿಕೆ), ನಾಟ್ಯ, ಕಾವ್ಯರಚನೆ, ವಾಚಿಕಾಭಿನಯದ ತಾಳಮದ್ದಳೆಗಳು ಇವರಿಗೆ ಸಿದ್ಧಿಸಿವೆ. ಹಲವು ಉದಯೋನ್ಮುಖ ಕಲಾವಿದರುಗಳಿಗೆ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಯಕ್ಷಗಾನಕ್ಕೇ ಮೀಸಲಾಗಿಟ್ಟ ಬದುಕಿನ ಕುರಿತು ಇವರಿಗೆ ಸಾರ್ಥಕ ಭಾವವಿದೆ.

ಗಿಡಮೂಲಿಕೆಗಳ ಕುರಿತು ವಿಶೇಷ ಆಸಕ್ತಿಯನ್ನು ವಹಿಸಿ ಬೆಂಗಳೂರಿನ FRLHT ಸಂಸ್ಥೆಯು ನಡೆಸಿದ “ಗ್ರಾಮೀಣ ಸಸ್ಯ ಶಾಸ್ತ್ರಜ್ಞ” ಸರ್ಟಿಫಿಕೇಟ್ ತರಗತಿಗಳಲ್ಲಿ ಭಾಗವಹಿಸಿ ನಾಟಿವೈದ್ಯಕೀಯದಲ್ಲಿ ತೊಡಗಿಸಿಕೊಂಡಿದ್ದಾರೆ. ವಿವಿಧ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವುದರಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ಸಕ್ರಿಯರಿವರು. ಕೃಷಿಕಾರ್ಯ ಹಾಗೂ ಅದಕ್ಕೆ ಪೂರಕವದ ಪಶುಸಂಗೋಪನೆಯು ಅತೀವ ಸಂತೋಷಕೊಡುವ ಕಾಯಕವೆಂದು ನಂಬಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಶ್ವಿನಿ ವಿಜಯ, ಗುರುದಕ್ಷಿಣೆ, ಗೋಮಹಿಮೆ ಹಾಗೂ ದಂಡಕಮೋಕ್ಷ

**ಟಿಪ್ಪಣಿ** :

ಮಂದಾರ್ತಿಮೇಳವೊಂದರಲ್ಲಿ ಒಂದು ವರ್ಷ ಇದರ ಅನೇಕ ಪ್ರದರ್ಶನಗಳಾಗಿವೆ.

# ಪ್ರಸಂಗ ಸಾಹಿತ್ಯ

**ನಾಟಿ - ಝಂಪೆ**
ಜಯತು ವಾರಣ ವದನ ಜಯತು ವಿಘ್ನವಿಹರಣ |
ಜಯತು ಪಾರ್ವತಿ ತನುಜ ಜಲಜಾಪ್ತ ತೇಜ || ಪ ||
ಜಯತು ಸಜ್ಜನ ಪೋಷ ಜಯತು ಸುಂದರ ವೇಷ |
ಜಯತು ಕಲಿಮಲನಾಶ ಜಯತು ಜಗದೀಶ ||
ಜಯತು ಮೂಷಿಕವಹನ ಜಯತು ಚಿಂತನ ಗಹನ |
ಜಯತು ವಿದ್ಯಾದಾತ ಜಿತಕಾಮ ಸ್ವಾಂತ || 1 ||
ಕೃತ್ತಿವಾಸನ ಕುವರ ಕುಜನವ್ರಜಸಂಹಾರ |
ನೃತ್ಯ ಗಾನವಿಲೋಲ ಸ್ತುತ್ಯ ಸುವಿಶಾಲ ||
ಚಿತ್ತದೊಳಗಿಹ ಸಕಲ ಛಿದ್ರುತಮ ವೃತ್ತಿಗಳ |
ನಿತ್ಯ ತೊಲಗಿಸು ಗಣಪ ನಿರುತ ಸುಕಲಾಪ || 2 ||

**ತೋಡಿ - ರೂಪಕ**
ಜಯತು ಜಯತು ವಿಶ್ವಪಾಲಕ | ಸಂರಕ್ಷಿಸೆಮ್ಮ |
ದಯೆಯೊಳಿಂದು ಶ್ರೀ ವಿನಾಯಕ ||
ಪ್ರಿಯದೊಳೆಮಗೆ ಸರಸ ಕಾರ್ಯ | ಜಯವ ಕರುಣಿಸುತ್ತ ಕಾಯ |
ಲಯವ ನೀಗಿ ಸರ್ವ ವಿಘ್ನ | ಭಯವ ತೊಲಗಿಸಯ್ಯ ಗಣಪ || 3 ||

**ವಾರ್ಧಕ**
ಗಜವದನನಾದಿಯಲಿ ನೆನೆವುತಂ ದುರ್ಗೆಯನು |
ಭಜಿಸುವೆನು ನಾ ಮನದಿ ಶಂಕರನ ವಂದಿಸುತ |
ಅಜರಮಣಿ ಜಿಹ್ವೆಯಲಿ ನೆಲೆಸುವಂದದಿ ಬೇಡಿಕೊಳ್ಳುತಂ ಪೊಡಮಡುತಲಿ ||
ಗಜರಾಜ ಮೊರೆಯಿಡಲು ಕಾಯ್ದವಗು ಮೇಣವನ |
ನಿಜಸತಿಗು ಸಹಿತೀಗ ಬಲಬಂದು ಪೊರೆಯುವೆನು |
ಸುಜನರೊಳು "ಅಶ್ವಿನೀ ವಿಜಯ" ದಾಯುರ್ವೇದ ವಿಜಯದಾ ಸತ್ಕಥೆಯನು || 4 ||

**ಸೌರಾಷ್ಟ್ರ - ತ್ರಿವುಡೆ**
ತರಣಿ ಸತಿಸಹ ತುರಗ ರೂಪದಿ |
ತರಳ ಯಮಳರ ಪಡೆದ ಕಥೆಯ |
ನ್ನೊರೆವೆ ಪದ್ಯದಿ ಯಕ್ಷಗಾನ ವಿ | ವರಿಸುವಂತೆ || 5 ||
ಸಕಲ ಜೀವೋನ್ನತಿಯ ಗುರಿಯನು |
ಸುಖದಿ ಹೊಂದಿದ ವೈದ್ಯ ರೀತಿಯು |
ವಿಕಸಿಸಿತು ಅಶ್ವಿನಿಕುವರರಿಂ | ಪ್ರಖರವಾಗಿ || 6 ||
ಆಶ್ವಿನೇಯರು ಸ್ವಾರ್ಥ ತ್ಯಾಗದಿ |
ವಿಶ್ವದೇಳ್ಗೆಗೆ ಸೇವೆ ಗೈದ ನಿ |
ದರ್ಶನಗಳಲಿ ಕೆಲವ ಪೇಳುವೆ | ವಿಶ್ವಸನದಿ || 7 ||

**ಪರಿವರ್ಧಿನಿ**
ಗುರುತರ ಛಂದೋ ಬಂಧವ ಪ್ರಾಸವ |
ನರಿಯೆನು ಪಿಂದಣ ಕವಿಗಳ ರಚನೆಯ |
ಸರಸವಿಲಾಸದ ಬರಹಕೆ ಮನಸೋತೀತೆರ ಬರೆವುದಕೆ ||
ಕರವಿಕ್ಕಿಹೆ ನುಡಿವೆಣ್ ನುಡಿಸಿರ್ಪುದ |
ಒರೆವೆನು ನುಡಿಜಾಣರೆ ತಿದ್ದೋದಿರಿ |
ಹರಸಿರಿ ಎನ್ನಿಂದುತ್ತಮ ಕಾವ್ಯ ಪರಂಪರೆ ಬರಲೆಂದು || 8 ||

**ಸಂಧಿ ೧: ಅಶ್ವಿನೀಪ್ರಾದುರ್ಭಾವ:**

**ಮಧ್ಯಮಾವತಿ – ತ್ರಿವುಡೆ**
ವಸು ಪ್ರಭಾಸನ ತನುಜ ತ್ವಷ್ಟ್ರನು |
ನಿಶಿತ ಮತಿಯುತ ಶಿಲ್ಪಿಯು |
ಕುಶಲ ಕಾರ್ಮಿಕರೊಳಗನನ್ಯನು |
ಮಿಸುನಿ ತೇಜದಿ ಪೊಳೆವನು || ಜಗದಿ ತಾನು || 9 ||

ಕಾಶಿಯಲಿ ಘನ ತಪವ ಗೈದು ಮ |
ಹೇಶನೊಲಿದಿರೆ ಗುರುವರ |
ನಾಶಿಸಿದ ದಕ್ಷಿಣೆಯನಿತ್ತೆನು |
ತೋಷಗೊಳಿಸಿದ ಹೆಮ್ಮೆಯ || ಹೊಂದಿರುವೆನು || 10 ||
ಇರುವಳೋರ್ವಳೆ ತನುಜೆ ಸಂಜ್ಞೆಯು |
ತರಣಿ ತಾ ವೈವಾಹವಾಗಿಹ |
ತರಳರುದಿಸಿರೆ ಯಮ ಯಮುನೆಯರು |
ವರ ಮನುವೆ ಮೊದಲಾದರು || ಹರುಷದಿಂದ || 11 ||
ಇಂತಿರುವ ಜನಕನ ಸಮೀಪಕೆ |
ಕಾಂತೆ ಸಂಜ್ಞೆಯು ನಮಿಸುತ |
ನಿಂತಿರಲವಳನೆತ್ತಿ ನುಡಿಸಿದ |
ಸಂತಯಿಸುತಲಿ ತಾನತಿ || ಕೌತುಕದಲಿ || 12 ||

**ಶಂಕರಾಭರಣ - ತ್ರಿವುಡೆ**
ಮಗಳೆ ನಿನ್ನಯ ಮೊಗಕೆ ಸಿರಿಯಾ |
ಸೊಗಸಿದಿಲ್ಲ ತಿಳಿಯೌ ||
ಸ್ವಗತದನುಭವ ನಗುವೆಯೌಷಧ | ಬಿಗಿದ ಮನಕೆ || 13 ||
ಮೌನದಲಿ ನೀ ನಿಂತುದೇತಕೆ |
ಏನಿದಾಯಿತು ನುಡಿನುಡಿ ||
ನಾನಿಹೆನು ಪರಿಹರಿಪೆ ಸಂಶಯ | ವೇನು ಪೇಳೂ || 14 ||

**ನೀಲಾಂಬರಿ - ಏಕ**
ಲಾಲಿಸೆನ್ನಯ ಮಾತನೂ | ಮತ್ಪಿತ ಪೇಳ್ವೆ |
ಗೋಳುಗಳೆಲ್ಲವನೂ ||
ತಾಳಲಾರದೆ ಬಂದೆನೂ | ದಾಂಪತ್ಯದ |
ಬಾಳಲಿ ಬಹು ನೊಂದೆನೂ || 15 ||
ಪದುಮ ಬಾಂಧವನಿಗೆನ್ನ | ವಿಧ್ಯುಕ್ತದಿ |
ಮದುವೆ ಮಾಡಿಸಿದೆ ಮುನ್ನ ||
ಗದರಿಪನುರಿಕಿರಣ | ಸೈರಿಸಲಾರೆ |
ಬದುಕಾಯ್ತು ದುರ್ಭರಣ || 16 ||

**ಭಾಮಿನಿ**
ಕುವರಿಯೆಂದುದ ಕೇಳುತಾಕ್ಷಣ |
ಕವಿಯೆ ಕತ್ತಲೆ ವಿಶ್ವಕರ್ಮಗೆ |
ಸುವದನವು ಕಪ್ಪಾಯ್ತು ವ್ಯಥೆಯೊಳು ಭಾವ ಬರಡಾಯ್ತು ||
ತವಕದಲಿ ನೇವರಿಸಿ ನುಡಿದನು |
ಭವನ ತೊರೆದುದರಿಂದಲುನ್ನತ |
ಧವಲ ಕೀರ್ತಿಯು ನಾಶವಾಯ್ತೌ ಸತ್ಯವಿದು ಕೇಳೂ || 17 ||

**ಭೈರವಿ - ಝಂಪೆ**
ಮಮ ತನೂಭವೆ ನಿನ್ನ | ಗಮನದಿಂದಚ್ಚರಿಯು |
ರಮಣನನು ತೊರೆಯುವುದು | ಸಮವೇನೆ ನಿನಗೆ || 18 ||
ಇಷ್ಟು ಕಾಲಗಳಿಂದ | ಸ್ಪಷ್ಟ ಬಾಳುವೆಯಂದ |
ಹುಟ್ಟಿರುವ ಮಕ್ಕಳನು | ಬಿಟ್ಟೇಗೆ ಬಂದೆ || 19 ||

**ತೋಡಿ - ಏಕ [ಅಂಜಬೇಡೆಲೆ ಸೀತೆ ಎಂಬಂತೆ]**
ಮಮ ತನುಜೆಯೆ ನೀನು | ಮತಿಗೆಟ್ಟು ನಡೆಯೇನು ||
ರಮಣನ ತೊರೆವುದು | ಸಮವೇನೆ ನಿನಗೆ || 20 ||
ಇಷ್ಟು ಕಾಲಗಳಿಂದ | ಸ್ಪಷ್ಟ ಬಾಳುವೆಯಂದ ||
ಹುಟ್ಟಿದಾ ಮಕ್ಕಳ | ಬಿಟ್ಟೇಕೆ ಬಂದೆ || 21 ||

**ನೀಲಾಂಬರಿ - ಝಂಪೆ**
ತನುಜಾತರಿಂಗೆನುತ ನಾನು | ಸೈರಣೆಯ |
ನನುಕರಿಸುತೀವರೆಗೆ ನೊಂದು ಬೆಂದಿಹೆನು ||
ಮನದಿ ನೀ ಯೋಚಿಸಿದನೆಲ್ಲ | ಬಿಡದಿಂತು |
ಚಣಚಣಕೆ ದೂರುವುದು ಸುವಿವೇಕವಲ್ಲ || 22 ||

**ಮಾರವಿ - ಏಕ**
ಒಪ್ಪುವುದೆಂತೀ ನುಡಿಗಳ ಸಂಜ್ಞೆಯೆ |
ಅಪ್ಪುದೆ ನೀತಿಗಳು ||
ಕಪ್ಪು ಕಲೆಯು ಪತಿ ತೊರೆದಿಹ ತರುಣಿಗೆ |
ಬಪ್ಪುದು ಬಾಳಿನಲಿ || 23 ||
ಗೃಹಕೃತ್ಯವು ಮೇಣ್ ಗರ್ಭವ ಧರಿಸುವ |
ವಿಹಿತದ ಕಾರ್ಯಗಳ ||
ಸುಹಿತದಿ ಶಿಶು ಸಂರಕ್ಷಿಪ ಕ್ರಮಗಳ |
ವಹಿಸಿದೆ ಸ್ತ್ರೀಯರಿಗೆ || 24 ||
ಸಲುಗೆಯ ನುಡಿಗಳ ಬಳಲಿಕೆ ತೊಳಲಿಕೆ |
ಸಲದೌ ನಿನಗಿಲ್ಲಿ ||
ತೊಲಗೀಗೆನುತಲೆ ಚಣ ಸಹ ನಿಲ್ಲದೆ |
ಒಳ ನಡೆದನು ತ್ವಷ್ಟ್ರ || 25 ||

**ಭಾಮಿನಿ**
ಕಂಡು ಗರತಿಯು ಮನದಿ ಕುಸಿದಳು |
ಗಂಡನಾ ಮನೆ ಮೊದಲೆ ತೊರೆದಿಹೆ |
ಕಂಡು ಕಾಣದೆ ಪಿತನು ತ್ಯಜಿಸಿದ ನುಡಿಯಲೇನಿದನು ||
ದಂಡವಾದೀ ಎನ್ನ ಬಾಳ್ವಿಗೆ |
ಕಂಡುಕೊಳ್ಳುವೆ ನೆಲೆಯನೆನ್ನುತ |
ಅಂಡಲೆಯದುತ್ತರವ ಕುರುಕ್ಷೇತ್ರದಲಿ ತಪಕೆಂದು || 26 ||

**ಸೌರಾಷ್ಟ್ರ - ತ್ರಿವುಡೆ**
ಸೂರ್ಯಸುತ ಯಮನೊಂದು ದಿವಸದಿ |
ಕಾರ್ಯ ಕಾರಣ ವ್ಯತ್ಯಯಗಳಂ |
ತರ್ಯವನು ಯೋಚಿಸಿದ ಜನನಿಯ | ಚರ್ಯೆಯಲ್ಲಿ || 27 ||
ಮೊದಮೊದಲು ಕಂಡಂಥ ರೀತಿಯು |
ಬದಲು ಹೊಂದಿತು ಸಾವರಣಿ ಶನಿ |
ಯುದರ ಪೋಷಕೆಯೊತ್ತು ಕೊಡುವಳು | ಸದನದಲ್ಲಿ || 28 ||
ಪಿರಿಯನೆನ್ನನು ಮನುವ ಮೇಣ್ ಯಮಿ |
ಯರನು ಕಡೆಗಣಿಸುವಳು ದಿನದಿನ |
ಸರುವ ಕಾರ್ಯದಿ ಹೀನವೆಣಿಪಳು | ಕಿರಿಯ ಗುಣದಿ || 29 ||
ಆಟಪಾಟದಿ ಸರಸ ನಡೆಯಲಿ |
ಕೂಟ ಸೇರದ ತೆರದ ವರ್ತನೆ |
ಕಾಟವಾಯ್ತಿದ ಪರಿಕಿಸುವೆ ನಾ | ಮಾಟವಾಗಿ || 30 ||

**ಸಾಂಗತ್ಯ - ರೂಪಕ**
ಎಂದು ನಿಶ್ಚಯ ಗೈದು ಬಂದತಿ ವಿನಯದಿ |
ವಂದಿಸಿದನು ಮಾತೆಯಡಿಗೆ ||
ಬಂದಿಹೆ ಹಸಿದು ನಾ ನೀಡೆನಗುಣಿಸನು |
ಎಂದೆನೆ ನುಡಿದಳಾತನಿಗೆ || 31 ||

**ಜಂಜೂಟಿ - ಏಕ**
ಯಾರಿದು ನೋಡುವೆ ಕಾಲನೆ ನೀ ನಗೆ |
ಬೀರುತಲುಣಿಸನು ಬೇಡುವೆಯಾ | ಬಹು |
ಕಾಡುವೆಯಾ | ಏನ್ | ನೋಡುವೆಯಾ || 32 ||

**ಮಧುಮಾಧವಿ - ಏಕ**
ದಿಟ್ಟಿಸಿ ಪರಿಹಾಸ ಗೈವುದೇಕೆನ್ನ |
ಸಿಟ್ಟು ತಾ ಹುಟ್ಟುವ ನಡತೆಯೊಳ್ ಮುನ್ನ ||
ಕೆಟ್ಟ ಮಕ್ಕಳಿಹರಲ್ಲಲ್ಲಿಯು ಹೊರತು |
ಕೆಟ್ಟ ಮಾತೆಯಿಹಳೆಂಬುದು ಬಲು ಪೊಸತು || 33 ||

**ಜಂಜೂಟಿ - ಏಕ**
ಭಲೆ ಭಲೆ ನೀತಿಯ ಪೇಳುವೆ ಸರ್ವವ |
ತಿಳಿದಿಹ ಎನ್ನಲಿ ಘನಪ್ರೌಢ | ಸರಿ |
ಸರಿ ಗಾಢ | ನೀ | ನಿಲಬೇಡ || 34 ||

**ಮಾರವಿ - ಏಕ**
ಮಂಗಲ ರೂಪಿಣಿ ಜನನಿಯೆ ನೀನತಿ |
ಹಂಗಿಸಿ ನುಡಿಯುವೆಯಾ ||
ಇಂಗಿತವೇನದು ತುಳಿಯುವೆನೆನ್ನುತ |
ಅಂಗಾಲೆತ್ತಿದನು || 35 ||

**ದೇಶಿ - ಮಟ್ಟೆ**
ಯಮನ ನೋಡುತ | ವನಿತೆ | ಭುಮೆಯ ಹೊಂದುತ ||
ಅಮಿತ ಶಾಪವಿತ್ತು ಸಿಟ್ಟು | ಶಮಿಪೆನೆನ್ನುತ || 36 ||
ಅರರೆ ಪೋರನೆ | ಗರ್ವ | ಗಿರಿಯನೇರ್ದನೆ ||
ದುರಿತ ಚರಣ ವ್ರಣಗಳಾಗಿ | ನಿರತ ಕೊಳೆಯಲಿ || 37 ||
ಎಂದು ಕುದಿಯುತ | ಛಾಯೆ | ಯಂದು ಶಪಿಸುತ ||
ಹಿಂದೆ ಸರಿಯೆ ಖೇದ ತಾಳು | ತೆಂದ ರವಿಸುತ || 38 ||

**ಭಾಮಿನಿ**
ಭ್ರಾಂತಿ ಹೊಂದಿದೆ ಎನ್ನ ಮನಸಿನ |
ಶಾಂತಿ ಕದಡಿತು ಮಾತೆ ಕ್ರೋಧವ |
ಛಾಂತಳಾದರೆ ರಕ್ಷಿಸುವರಾರಿನ್ನು ಕಂದರನು ||
ನಿಂತುಗೊಂಬರೆ ಕೊಳೆತ ಕಾಲ್ಗಳು |
ಮುಂತೆ ಕೊಳೆಜಲ ಹರಿಯೆ ವಾಸನೆ |
ಎಂತು ಸೈರಿಪೆ ಸೆಳೆತದುರಿಗಳ ಕೊರೆವ ಕ್ರಿಮಿಗಳನು || 39 ||

**ನಾದನಾಮಕ್ರಿಯೆ - ಅಷ್ಟ**
ಮಮ್ಮಲ ಮರುಗಿದ ರವಿಸೂನು | ಇನ್ನು |
ಸುಮ್ಮನೆ ಹಲುಬುವೆ ಫಲವೇನು ||
ಒಮ್ಮೆ ನಾನುಸುರುವೆ ಜನಕಗೆ | ಎಂದು |
ನೆಮ್ಮುತ ಪೊರಟ ತಾನಲ್ಲಿಗೆ || 40 ||
ಪಕ್ಷಿಗಳ್ ಚಿಲಿಪಿಲಿಗುಟ್ಟಲು | ಜಗ |
ವಕ್ಷಿಯ ತೆರೆದೀಕ್ಷಿಸುತಿರಲು ||
ತಾರ್ಕ್ಷ್ಯಾಗ್ರಭವನ ಸಾರಥ್ಯದಿ | ಕರ್ಮ |
ಸಾಕ್ಷಿಯು ಮೂಡಿದ ಪೂರ್ವದಿ || 41 ||
ದಿನಮಣಿ ತನಯನ ನೋಡಿದ | ಬಾ ಬಾ |
ರೆನುತಲಿ ಕರೆದು ಮಾತಾಡಿದ ||
ಮನದ ಬೇಗುದಿಗಳಿದೇತಕೆ | ನಿನ್ನ |
ತನುವು ಕಂಪಿಸುತಿದೆ ಭಯವೇಕೆ || 42 ||

**ಶಂಕರಾಭರಣ - ಏಕ**
ಆಪ್ಯಾಯನದ ಆಲಿಂಗನವು |
ತಪ್ಪೀತೆಂದು ಚಣವ ತಡೆದು |
ಅಪ್ಪನಿಂಗೆ ವಿಷಯಗಳನು | ಒಪ್ಪಿಸಿರ್ದನು || 43 ||
ತಾರತಮ್ಯ ಗೈವಳ್ಮಾತೆ |
ಸಾರಿ ಕೇಳ್ದೆ ವಿಷಯ ವಾರ್ತೆ |
ದೂರುತೆನ್ನ ನಿಂದಿಸಿದಳು | ಕಾರಣವಿಲ್ಲ || 44 ||
ಕೆಲವು ಕಾಲದಿಂದ ಗೋಳು |
ಗೊಳಿಸೆ ಸೈರಿಸಿದೆವದಿಂದು |
ತುಳಿಯ ಪೋದೆ ಶಾಪ ಕೊಟ್ಟು | ತಳುವದ್ಯೈದಳು || 45 ||
ಶಾಪದುರಿಯ ತಣಿಸೋ ಈಗ |
ಪಾಪಗಳನು ಹರಿಸೋ ಬೇಗ |
ತಾಪ ಹೆಚ್ಚದಂತೆ ಕಾಯೋ | ಕೋಪ ಮಾಡದೆ || 46 ||

**ವಾರ್ಧಕ**
ಕಂದನನು ತೆಗೆದಪ್ಪಿ ನುಡಿದನಾ ಭಾಸ್ಕರನು |
ಸಂದುದಂ ಚಿಂತಿಸಲು ಫಲಗಳೇನಿಹುದು ತಿಳಿ |
ಕಂದುಗೊರಳನೊಲುಮೆಯ ತಪಸಿನಿಂ ನೀ ಗಳಿಸು ಕ್ಷೇತ್ರ ಗೋಕರ್ಣಕೈದು ||
ಎಂದೆಂಬ ಜನಕನಲಿ ಪೇಳ್ದನಾ ಯಮನಾಗ |
ತಂದೆಯೇ ನಾ ನಡೆಯಲಾರೆ ನೋಡುವುದಿತ್ತ |
ನೊಂದಿರುವೆ ಕೊಳೆತ ವ್ರಣ ಸುರಿವ ಜಲ ವಾಸನೆಯ ಪರಿಹರಿಸು ದಯೆದೋರುತ || 47 ||

**ಕಂದ**
ರವಿ ಕರುಣಾರ್ದ್ರ ಹೃದಯದಿಂ |
ತವಕಿಸಿ ಕುಕ್ಕುಟವ ನಿರ್ಮಿಸಲದು ಕೊಳೆಗಳಂ ||
ಸವಿದಾ ಕ್ರಿಮಿಗಳ ಹೀರಿರೆ |
ಜವದಿಂ ಸರಿಹೊಂದಲಾಗ ಪೊರಮಟ್ಟ ಜವಂ || 48 ||

**ಕೇದಾರಗೌಳ - ಝಂಪೆ**
ಏನಿದಾಶ್ಚರ್ಯ ಜಗದೆ | ಮಾತೆಯೇ |
ಸೂನುವನು ಶಪಿಪುದಿಹುದೆ ||
ಮಾನಿನಿಯ ಪರಿಕಿಸುವೆನು | ಎನುತಾಗ |
ರಾಣಿವಾಸಕೆ ಬಂದನು || 49 ||
ಮಡದಿ ಮಣಿ ಬಾಬಾರೆಲೆ | ಸತ್ಯವನು |
ನುಡಿಯೆ ನೀ ತ್ವಷ್ಟೃ ಬಾಲೆ ||
ಹಡೆದ ಮಗನನು ಶಾಪದಿ | ನೋಯಿಸಿದೆ |
ಅಡಸಿರುವ ಅಷ್ಟಮದದಿ || 50 ||
ತಲ್ಲಣಿಸುತಾಗ ನೀರೆ | ನಾನು ನಾ |
ನಲ್ಲ ಹೊರ ಕವಚ ಬೇರೆ ||
ಸುಲ್ಲಲಿತೆ ಸಂಜ್ಞೆಯಂದು | ನಿನ್ನ ಬಿಸಿ |
ಯಲ್ಲವಳು ನೊಂದುಬೆಂದು || 51 ||
ನೆರಳಿಗಾಕಾರ ಕೊಟ್ಟು | ಛಾಯೆಯೆಂ |
ದಿರಿಸುತೆನ್ನನ್ನು ಬಿಟ್ಟು ||
ಪೊರಡುತಿರೆ ಗುಪ್ತವೊಂದ | ಬಿಟ್ಟುಕೊಡ |
ದಿರಲೆಂಬ ಮಾತಿನಿಂದ || 52 ||

**ಕುಸುಮ ಷಟ್ಪದಿ**
ಮಿತಿಯರಿತು ನಟಿಸಿದೆನು |
ಸುತರನ್ನು ಪಡೆದಿಹೆನು |
ಮತಿವಂತ ಕ್ಷಮಿಸೆನ್ನ ಎಂದೆನುತಲಿ ||
ವ್ಯಥಿಸುತ್ತ ಕೈ ಮುಗಿದ |
ಸತಿಯನುರೆ ಸಂತವಿಸಿ |
ಅತಿತೇಜ ಪೊರಟ ಮಾತುಳನ ಮನೆಗೆ || 53 ||

**ಕೇದಾರಗೌಳ - ಅಷ್ಟ**
ಜಾಮಾತ ಬರಲಿಂತು ಆ ಮಾವನಿದಿರೆದ್ದು |
ಪ್ರೇಮದಿ ಮನ್ನಿಸಿದ ||
ಕ್ಷೇಮವೆ ಬರವೇನು ಶ್ರೀಮುಖ ಕಂದಿದೆ |
ಕಾಮಿತವೇನುಸಿರು || 54 ||
ತಿಳಿದಿದೆ ನಿಮಗೆಲ್ಲ ಕೆದಕಿ ಕೇಳುವುದೇಕೆ |
ಲಲನೆ ಸಂಜ್ಞೆಯು ವಂಚಿಸಿ ||
ತಳುವದೆ ತೊರೆದೆನ್ನ ತವರಿಗೆ ಬಂದರೆ |
ತಿಳುಬಾರದೆ ಬುದ್ಧಿಯ || 55 ||
ತೊರೆವರೆ ಕಾರಣ ತಿಳುಹುವೆ ಕೇಳಯ್ಯ |
ಉರಿಯನು ಸಹಿಸದಾಕೆ ||
ಬರಲಿಲ್ಲಿ ಪೇಳಿದ ನೀತಿ ಮಾರ್ಗವನೆಲ್ಲ |
ಸರಿಸಿ ತಾ ತೆರಳಿದಳು || 56 ||
ಉತ್ತರ ಕುರು ಕ್ಷೇತ್ರ ಸೇರುತ ತಪದಲ್ಲಾ |
ಸಕ್ತಳಾಗಿಹಳೆಂದೆನೆ ||
ಕತ್ತಲ ವೈರಿಯು ಸತಿಯು ಸೇರುವ ತೆರ |
ಯುಕ್ತಿಯ ಗೊಳಿಸಿರೆಂದನು || 57 ||

**ದ್ವಿಪದಿ**
ಕರ ಮುಗಿದು ಇಂತೆಂದ ಭಾಸ್ಕರನಿಗಾಗ |
ಸರಸದಿಂ ವಿಶ್ವಕರ್ಮನು ಪೇಳ್ದ ಬೇಗ || 58 ||
ಅತಿಯಾದ ಶಾಖವನು ಕುಗ್ಗಿಸುವೆ ನಾನು |
ಶತಪತ್ರಮಿತ್ರ ಸಮ್ಮತಿಯೆಂದನವನು || 59 ||
ರವಿತೇಜವನು ತೆಗೆದು ಸುರಶಿಲ್ಪಿ ತಾನು |
ವಿವಿಧಾಯುಧಂಗಳನು ಮುದದಿ ರಚಿಸಿದನು || 60 ||

**ಶ್ರೀ - ಏಕ**
ಹರಿಗೆ ಸುದರ್ಶನ ಹರನಿಗೆ ಶೂಲವ |
ಸುರಪಗೆ ವಜ್ರವನು ||
ವಿರಚಿಸುತರ್ಪಿಸೆ ಹರುಷದಿ ಧರಿಸುತ |
ಪೊರಟರು ಬೇಗದಲಿ || 61 ||
ಮಾವನ ಬೀಳ್ಕೊಂಡಾರ್ಯಮ ಪೊರಟನು |
ಭಾವೆಯ ಪುಡುಕಲಿಕೆ ||
ಆ ವನಿತೆಯು ತುರಗದ ರೂಪಿನೊಳಿಹ |
ಸೋವನು ತಿಳಿದೆಂದ || 62 ||

**ನವರೋಜು - ಏಕ**
ಇಳಿದವರಾ ಎತ್ತಲಿಕೆ | ನಾವ್ | ಇಳಿಯುವುದೂ ವ್ಯವಹರಿಕೆ ||
ನಳಿನಾಕ್ಷಿಯ ಹೃದಯದ ತುಮುಲವ ನಾ |
ತಿಳಿವರೆ ಹಯದಾಕಾರವ ತಾಳುವೆ || 63 ||
ಅಶ್ವದ ಆಕಾರವನು | ಸ | ಪ್ತಾಶ್ವನು ತಾ ಧರಿಸಿದನು ||
ಅಶ್ವಿನಿಯಾಗಿಹ ಸತಿಯೊಳು ಸರಸದಿ |
ವಿಶ್ವಾಸದೊಳಾತನು ಕೂಡಿದನೂ || 64 ||
ಆಕೆಯು ತಾನಾಕ್ಷಣದಿ | ಬಲು | ಜೋಕೆಯೊಳವಸರದಿ ||
ವ್ಯಾಕುಲಗೊಳುತಾ ವೀರ್ಯವ ನಾಸದಿ |
ನೂಕಲು ಇಬ್ಬಾಗಾಗುತ ಬಿದ್ದಿತು || 65 ||

**ದ್ವಿಪದಿ**
ಸೌಂದರ್ಯ ಮೈತಳೆದು ಶೈಶವವ ಗಳಿಸಿ |
ಎಂದೆಂಬ ಭಾವದಲಿ ಯಮಳರಾಗುದಿಸಿ || 66 ||
ನೇಸರನು ಸಂಜ್ಞೆಯನು ಸರಸದಲಿ ರಮಿಸಿ |
ವೇಷದಾ ಪೊರೆ ಕಳಚೆ ವಾಸ್ತವವ ತಿಳಿಸಿ || 67 ||
ಮನ್ನಿಸಿರಿ ತಪ್ಪುಗಳನೆಂದು ಕರ ಮುಗಿಯೆ |
ಸನ್ನುತನು ಒಪ್ಪಿಕೊಂಡವಳ ಮೇಲ್ಸರಿಯೆ || 68 ||

**ಸೌರಾಷ್ಟ್ರ - ತ್ರಿವುಡೆ**
ವನಜ ಬಾಂಧವ ತರುಣಿ ಸಂಜ್ಞೆಯ |
ತನುಜರಾಗಿಹ ಆಶ್ವಿನೇಯರು |
ಮನಸಿಜೋಪಮ ರೂಪಿನಲಿ ದಿನ | ದಿನದಿ ಬೆಳೆಯೆ || 69 ||
ರೂಪ ಸಂಪದವೊಂದೆ ಸಾಲದು |
ಲೋಪವಿಲ್ಲದ ಪದವಿಗೋಸುಗ |
ಆಪಜಾಸನನೊಲವ ಗಳಿಸಲು | ಪೋಪೆವೀಗ || 70 ||

**ವಾರ್ಧಕ**
ಅದ ನೆನೆದು ಬ್ರಹ್ಮನಂ ದೃಢಮನದಿ ಧ್ಯಾನಿಸಲು |
ವಿಧಿ ದಯದಿ ಮೈದೋರಿ ಬೇಡಿರುವ ಉಪವೇದ |
ವದುವೆಯಾಯುರ್ವೇದವಂ ಕೊಟ್ಟು ಪೂರ್ಣತೆಯ ಮಾರ್ಗವನು ಸೂಚಿಸಿದನು ||
ಮಧುವಿದ್ಯೆಯಂ ನೀವು ದಧ್ಯಂಚ ಋಷಿಗಳಿಂ |
ಮುದದಿಂದ ಪಡೆದಾಗ ಪರಿಣಾಮವಹುದೆಂದು |
ವಿಧಿಸುತ್ತ ನೇಮವಂ ಥಟ್ಟನಂತರ್ಧಾನ ಗೈದಿರಲು ಅಶ್ವಿನಿಯರು || 71 ||

**ಸುರುಟಿ - ಏಕ**
ಹರುಷದೊಳಾದಿನದಿ | ಅಶ್ವಿನಿ |
ಯರು ತಮ್ಮೊಳು ಮುದದಿ ||
ಶರಣರ ರಕ್ಷಿಪ | ಪರಮರ್ಷಿಯನುರೆ |
ದರುಶನಕಾಂಕ್ಷಿಸಿ | ಪೊರಟರು ಬೇಗದಿ || 72 ||
ಎರಗಿದ ಯಮಳರನು | ನೆಗಹುತ |
ಲರುಹಿದ ಮುನಿವರನು ||
ಸ್ಮರಸಮ ರೂಪರೆ | ತ್ವರಿತದೊಳೀದಿನ ||
ಬರಲೇಂ ಕಾರಣ | ವರುಹಿಸಿ ವಹಿಲದಿ || 73 ||

**ತೋಡಿ - ರೂಪಕ**
ಮುನಿವರೇಣ್ಯ ಸಾತ್ವಿಕಾರ್ಣವ | ನೀ ಲಾಲಿಸಯ್ಯ |
ವಿನಯದಿಂದ ಪೇಳ್ವ ಪ್ರವರವ ||
ಜನನಿ ಸಂಜ್ಞೆ ಜನಕ ತಪನ | ವಿನುತ ತುರಗ ರೂಪಿನಿಂದ |
ತನಯರೆಮ್ಮ ಪಡೆದರೆಮಗೆ | ಅನಘ ಬ್ರಹ್ಮವಿದ್ಯೆ ನೀಡು || 74 ||
ಬ್ರಹ್ಮನೊಲುಮೆ ಪಡೆದೆವಿಂದಿಗೆ | ಆಯುರ್ವೇದ |
ನೆಮ್ಮಿಕೊಂಡೆವೆಮ್ಮ ಬಾಳ್ವಿಗೆ ||
ಬ್ರಹ್ಮ ವಿದ್ಯೆ ಗಳಿಸಲೆಂದು | ಬ್ರಹ್ಮ ಪೇಳ್ದ ಮಾತಿಗಾಗಿ |
ನಿಮ್ಮ ಸೇರ್ದೆವಯ್ಯ ದಯದಿ | ಸಮ್ಮತಿಸುತ ಕಲಿಸಿರೆಮಗೆ || 75 ||
ಬೇಡ ಬೇಡ ಸೂರ್ಯ ಬಾಲರೆ | ನೀವಿದಿನ್ನೂ |
ನೋಡಲಿಂತು ಮುಗ್ಧ ತರಳರೆ ||
ಗಾಢತರದ ಬ್ರಹ್ಮ ವಿದ್ಯೆ | ನೀಡಲದಕೆ ಸಾರ್ಥಕತೆಯು |
ರೂಢಿಯೊಳಗೆ ನಿಮಗೆ ಸಿಗದು | ನಾಡ ಪ್ರಜ್ಞೆ ಮೂಡೆ ಕೊಡುವೆ || 76 ||

**ಆರ್ಯಸವಾಯಿ - ಏಕ (ಶರ ಷಟ್ಪದಿ)**
ನಗುತಲಿ ಪೇಳಿದ | ಜಗಪರ್ಯಟನವ |
ಮಿಗೆ ಕೈಗೊಳ್ಳಲು ನಿಮಗಿಂದು ||
ಬಗೆಬಗೆಯಿಂದಲಿ | ಸಿಗುವಂಥನುಭವ |
ಮಿಗಿಲೆನಿಪುದು ವಿದ್ಯೆಯನೆಂದು || 77 ||
ಗುರುವರ ಪೇಳ್ದುದ | ನರಿತಾ ಯಮಳರು |
ಧರಣಿಯ ಸಂಚರಿಪುದ್ದೇಶ ||
ಧರಿಸುತ ಬಂದರೆ | ಪರಿಕಿಸಿ ಕಂಡರು |
ಮರುಕದ ಜತೆಯಲಿ ಸಂತೋಷ || 78 ||
ಅಳುವಾ ಗುಬ್ಬಿಯ | ತಳುವದೆ ನೋಡಲು |
ಕಳವಳಗೊಂಡಿದೆ ಮರಿಯಲ್ಲಿ ||
ನಿಲದಾಹಾರವ | ಮೆಲುವಹ ಗೃಧ್ರವು |
ಸಿಲುಕಿಸಿ ತನ್ನಯ ಬಾಯಲ್ಲಿ || 79 ||
ತಾಯಿಯ ಗೋಳನು | ಆಯದಿ ಕೇಳುತು |
ಪಾಯವ ಗೊಂಡಾ ಸುರವರರು ||
ನೋಯದ ತೆರದಲಿ | ಸಾಯಕ ಬಿಡಲಾ |
ಬಾಯನು ಮಿಡುಕದೆ ತೆರೆದಿರಲು || 80 ||
ಪಕ್ಷಿಯ ಮರಿಯು ಸು | ರಕ್ಷಿತ ತಾಣದ |
ಕಕ್ಷೆಯ ಸೇರಿರೆ ಮೊದಲಾಗ ||
ವೀಕ್ಷಿಸಿ ಬಾಣವ | ಲಕ್ಷಿಸಿ ತೆಗೆಯಲು |
ತಕ್ಷಣ ಗೃಧ್ರವು ಸರಿದಾಗ || 81 ||
ಅಶ್ವಿನಿ ಕುವರರು | ಅಶ್ವವನೇರುತ |
ವಿಶ್ವ ಪ್ರದಕ್ಷಿಣೆ ಗೈಯುತ್ತ ||
ನಶ್ವರ ಶಾಶ್ವತ | ಪಾಶ್ವ್ರ ವಿಚಿತ್ರವ |
ಹ್ರಸ್ವ ವಿರದೆತಾವೀಕ್ಷಿಸುತ || 82 ||

**ಭೈರವಿ - ಝಂಪೆ**
ಇರಲಿತ್ತ ಸುರಪುರದಿ | ಪುರುಹೂತನೋಲಗದಿ ||
ಸುರವರರ ಕೂಡುತ್ತ | ಮೆರೆದಿರ್ದನಾಗ || 83 ||
ಸುಭಗತಮ ಸುರಮುಖ್ಯ | ಸಭೆಯೊಳಗೆ ಸೌಂದರ್ಯ |
ದಭಿವ್ಯಕ್ತಿ ಸಂಭ್ರಮಕೆ | ನಿಭವನ್ಯವಿಲ್ಲ || 84 ||
ಅಜಪುತ್ರ ನಾರದರು | ಕುಜನಹರ ನಾಮವನು |
ಭಜಿಸುತ್ತ ಬರುತಿರಲು | ಗಜವಾಹ ನೋಡಿ || 85 ||

**ಕೇದಾರಗೌಳ - ಝಂಪೆ**
ಬಂದೆಯಾ ಬಾ ನಾರದ | ಪೊಸವಿಷಯ |
ವೊಂದಾದರಿಹುದೆ ಜಗದಾ ||
ನಿಂದಿರದೆ ಚರಿಪೆ ನೀನು | ನವ್ಯದಾ |
ನಂದವನು ತಂದೆಯೇನು || 86 ||

**ಬೇಗಡೆ - ಏಕ**
ಎಲೆ ಪುರಂದರ ಲಾಲಿಸೈ ನೀನು | ಅಭಿಮಾನ ಭಾವವ |
ತಳೆದು ಪೇಳುವ ವಚನವೆಲ್ಲವನೂ ||
ಗಳಿಸಿ ಮೂಲೋಕಾಧಿಪತ್ಯವ |
ಚೆಲುವ ಛಲಬಲವಾಂತು ಮೆರೆದಿಹೆ |
ಸಲುವ ಪೂರ್ಣತೆ ಹೊಳಹು ಬರಲಿಕೆ |
ಕಲಿಯಬೇಕೈ ಬ್ರಹ್ಮ ವಿದ್ಯೆಯ || 87 ||

**ಕೇದಾರಗೌಳ - ಝಂಪೆ**
ನಿಶಿತಮತಿ ನಿನ್ನ ಮಾತು | ಸರಿಯಿಹುದು |
ಋಷಿವರನೆ ಮನಕೆ ಬಂತು ||
ವಸುಧೆ ಮೂರರಲಿ ಯೆನ್ನ | ಹಿರಿಮೆಯರಿ |
ತುಸುರುವರು ಇಹರೆ ಮುನ್ನ || 88 ||

**ಸಾಂಗತ್ಯ - ರೂಪಕ**
ಮಘವ ಕೇಳ್ ದಧ್ಯಂಚ ಋಷಿ ಬ್ರಹ್ಮ ವಿದ್ಯೆಗೆ |
ಜಗದೊಳುತ್ತಮ ಗುರುವಹುದು ||
ಲಘುಬಗೆಯಿಂದನುನಯದಿ ನೀ ಪಡೆಯೆಂದು |
ನಗುತಲಿ ನಾರದ ನಡೆದ || 89 ||
ನಾರದನೆಂದುದ ಕೇಳುತ ಪುರುಹೂತ |
ಭೂರಿ ಸಂತೋಷದೊಳಾಗ ||
ಯಾರಾತ ಮುನಿಯವ ವಿದ್ಯೆಯ ಬೋಧಕ |
ಸಾರಿ ತಿಳಿವೆನೆಂದು ಪೊರಟ || 90 ||

**ಕೇದಾರಗೌಳ - ಅಷ್ಟ**
ಪರಮರ್ಷಿ ದಧ್ಯಂಚರಾಶ್ರಮ ಕಾಡಿನ |
ತರುಲತೆ ಮಧ್ಯದಲಿ ||
ನೆರೆ ಶಾಂತ ಪರಿಸರ ಹುಲಿಸಿಂಹ ಗೋವ್ಗಳು |
ಹರಿಣ ಶಶಾದಗಳು || 91 ||
ಹುಟ್ಟಿನಿಂದಿಹ ಸಹಜ ವಿರೋಧ ಭಾವವಂ |
ಬಿಟ್ಟನುರಾಗಗಳು ||
ದಟ್ಟಯಿಸಿದ ವಾತಾವರಣದೊಳುಪಸ್ಥಿತಿ |
ಪಟ್ಟ ಶಿಷ್ಯರ ನಡುವೆ || 92 ||
ಸುರಪನ ಕಂಡಾಗ ಮುನಿವರನಿದಿರೆದ್ದು |
ಕರವಿಡಿದಾಕ್ಷಣದಿ ||
ಕರೆತಂದು ಮನ್ನಿಸಿ ಬಂದಿರ್ಪ ಕಾರಣ |
ವರುಹೆಂದನವ ಮುದದಿ || 93 ||
ಮುನಿವರ ಕೇಳ್ ಬ್ರಹ್ಮ ವಿದ್ಯೆ ಸಾರವನೆಲ್ಲ |
ಎನಗಿಂದು ಬೋಧಿಸಯ್ಯ ||
ಘನವಾದ ವಿದ್ಯೆಯ ಶ್ರದ್ಧೆಯಿಂ ಕಲಿವೆ ವ |
ಚನವಿದು ಸತ್ಯವಯ್ಯ || 94 ||

**ಮಧುಮಾಧವಿ - ಏಕ**
ಪುರುಹೂತ ನಿನಗೇಕೆ ಪರವಿದ್ಯೆ ಚಿಂತೆ |
ಸುರುಚಿರ ಶಚಿರಂಭೆ ಮೇನಕೆ ಮುಂತೆ ||
ಸರಸದೊಳೋಲಾಡುತಧಿಕಾರದೊಳಗೆ ||
ಮೆರೆವೆ ನೀನಧಿಕ ಕೀರ್ತಿಯ ತೇಜ ಬೆಳಗೆ || 95 ||

**ಘಂಟಾರವ - ಅಷ್ಟ**
ನುಡಿಯ ಕೇಳುತ ಸುರಪಾಲ ಕುದಿದೆದ್ದು |
ಸಿಡಿಲಿನಂತಾರ್ಭಟಿಸಿ ಪೇಳ್ದನು |
ಕಡಿಮೆ ಯೆಣಿಪುದುಯೇತಕೋ || 96 ||
ಸ್ಪಷ್ಟವಾಗಿಹ ಮಹದಾದೆನ್ನಿಷ್ಟವ |
ತುಷ್ಟಿಗೊಳಿಸದೆ ದಿಟ್ಟತನದಲಿ |
ಕೆಟ್ಟ ಗರ್ವವ ತೋರ್ಪೆಯ || 97 ||
ವಿದ್ಯೆಯಂ ಪರರಿಂಗಿತ್ತೆಯಾದರೆ |
ಸುದ್ದಿಯಿಲ್ಲದೆ ಶಿರವ ಕಡಿದಪೆ |
ವೃದ್ಧಶ್ರವನಾ ಮಾತಿದು || 98 ||

**ಘಂಟಾರವ - ರೂಪಕ**
ಎಂದು ಮಘವನೂ | ಪೊರಡೆ ಮುನಿಪನು ||
ನೊಂದು ಖಿನ್ನತೆ | ಹೊಂದುತೆಂದನು || 99 ||
ಆಧಿಪತ್ಯದ | ಮದವಿಕಾರದಿ ||
ಬಾಧೆ ತಂದಪ | ಎನ್ನ ಬದುಕಿಗೆ || 100 ||
ಪೇಳಲಾರಿಗೆ | ಭಾರಿ ಸಂಕಟ ||
ಶೂಲಿ ಶಂಕರ | ಪಾಹಿಮಾಂ ಶಿವ || 101 ||

**ಶಂಕರಾಭರಣ - ತ್ರಿವುಡೆ**
ಎಂದು ಚಿಂತಿಸಲಶ್ವಿನೀಸುತ |
ರಂದು ಬಂದು ತಾವತಿ |
ಮಂದಹಾಸವ ಸೂಸಿ ಮುನಿಪನೊ | ಳೆಂದರಾಗ || 102 ||
ಪೇಳಿದಾಣತಿಯೊಪ್ಪಿ ಸೂಕ್ಷ್ಮವ |
ತಾಳಿ ಜಗದಿ ನಿತ್ಯದಿ |
ಆಲಸಿಕೆಯನು ತೊರೆದು ಕಂಡೆವು | ಮೂಲಗಳನೂ || 103 ||
ವೇಗದಿಂ ಜಗ ತಿರುಗಿ ಬಂದೆವು |
ಈಗ ನೀಡು ವಿದ್ಯೆಯ ||
ಯೋಗವೆಂದೇ ಸೇವೆ ಮಾಳ್ಪೆವು | ಸೋಗಿದಲ್ಲ || 104 ||

**ಕಾಂಬೋಧಿ - ಝಂಪೆ**
ಮುಖವ ನೋಡುತಲಿ ಚಣ ಮೌನವಾಂತನು ಮುನಿಪ |
ಅಕುಟಿಲರೊಡನೆ ಪೇಳ್ದನಾಗ ||
ಮಿಕವಾದೆ ಬಲೆಯೊಳಗೆ ತಲೆಗಡಿವೆನೆಂದು ಶತ |
ಮಖನು ನಿರ್ಬಂಧ ಹೇರಿದನು || 105 ||

**ಸಾರಂಗ - ಅಷ್ಟ**
ಹೀಗೆಂದನೇನ್ ಸುರಪ | ಘನ ಚಿಂತೆಯ |
ಹೋಗಲಾಡಿಸಿ ಮುನಿಪ ||
ಲೋಗತನಕೆ ಮದ್ದಿಲ್ಲ ವಿವೇಕದೋಳ್ ನಾವು ||
ಸಾಗುವಹ ಸುಚಿಕಿತ್ಸೆಗೈವೆವು |
ಈಗ ಹಯಮುಖವಿರಿಸುವುದು ಹಿತ || 106 ||

**ದ್ವಿಪದಿ**
ತುರಗ ಮುಖ ಸೇರಿಸಲು ಮುನಿಪ ಸರಿಯೆಂದ |
ಸುರರು ಸುಚಿಕಿತ್ಸೆಯನು ಗೈದಿರಲು ಚೆಂದ || 107 ||
ವಿದ್ಯೆಯನು ಬೋಧಿಸುತ ಕುಳ್ಳಿರಲಿಕಂದು |
ಸದ್ದದನು ಕೇಳುತಲಿ ಸುರಪಾಲ ಬಂದು || 108 ||

**ಮಾರವಿ - ಏಕ**
ಗುಡುಗುಡಿಸುತಲಾ ಜಂಭವಿನಾಶನ |
ಕಿಡಿಗೆದರುತಲಾಗ ||
ನುಡಿದ ನಿವಾಳಿಯೆ ದುರಹಂಕಾರವು |
ಅಡರಿದೆ ಶಿರದೊಳಗೆ || 109 ||
ಸ್ವರ್ಗಾಧಿಪನಾದೆನ್ನಯ ನುಡಿಗಳ |
ಕುಗ್ಗಿಸಿ ನೀ ನಡೆದೆ ||
ಬಗ್ಗಡದಂತಿಹ ನಡತೆಯ ಮೆಚ್ಚೆನು |
ಜಗ್ಗದೆ ಶಿಕ್ಷಿಸುವೆ || 110 ||
ಮೋರೆಯನೀಕ್ಷಿಸೆನೆನುತಲಿ ರೌದ್ರಾ |
ಕಾರವ ತಾಳಿದನು ||
ಮೀರಿದ ಕ್ರೋಧದಿ ತಲೆಗಡಿದುರುಳಿಸಿ |
ಸಾರಿದ ಸುರಪುರಕೆ || 111 ||

**ಭಾಮಿನಿ**
ಸುರ ಚಿಕಿತ್ಸಕ ಸೂರ್ಯಬಾಲರು |
ಪರಿಕಿಸುತಲಾಕ್ಷಣದೊಳಗೆ ನಿಜ |
ಶಿರವ ಸೇರಿಸೆ ನಗುತಲಿದ್ದನು ಮುನಿಪ ದಧ್ಯಂಚ ||
ಪರಮ ವಿದ್ಯೆಯ ಮುಂದುವರೆಸುತ |
ಪರಿ ಸಮಾಪ್ತಿಯ ಗೈಯಲಾದಿನ |
ಎರಗಿ ನಿಂದರು ಘನ ವಿನೀತರು ಭಕ್ತಿಭಾವದಲಿ || 112 ||

**ಸಾವೇರಿ - ರೂಪಕ**
ಕಾರುಣ್ಯ ಸಿಂಧು ಪುಣ್ಯ ಪುರುಷ ಗುರುವರೇಣ್ಯನೆ |
ಧನ್ಯರಾದೆವಯ್ಯ ನಾವು ಪೂರ್ಣ ಕಾಮನೆ || 113 ||
ನೆಮ್ಮದಿಯ ಪಡೆದೆವಿಂದು ನಿಮ್ಮ ಕೃಪಾ ವರ್ಷದಿ |
ಮಧುರ ಭಾವ ಸಮತೆಯೆಣಿಕೆ ಪ್ರಾಣಿ ವರ್ಗದಿ || 114 ||

**ಸಾಂಗತ್ಯ - ರೂಪಕ**
ತೊಡಕ ನಿವಾರಿಸಿ ವಿದ್ಯೆಯ ಕಲಿತಿರಿ |
ದಡಸೇರ್ದ ನಾವಿಕರಂತೆ ||
ಪೊಡವಿ ಮೂರರಲಿ ನೀವುತ್ತಮ ವೈದ್ಯರು |
ಮೃಢ ನಿಮ್ಮ ನಿರತ ರಕ್ಷಿಸಲಿ || 115 ||

**ಸಂಧಿ ೨: ದಕ್ಷಯಜ್ಞ ( ಹವಿರ್ವಾಗ್ದಾನ)**

**ಸೌರಾಷ್ಟ್ರ - ತ್ರಿವುಡೆ**
ಸುರಪನೋಲಗವಿತ್ತು ನುಡಿದನು |
ಮೆರೆವ ಸಂಗಮದಲ್ಲಿ ನಡೆಯುವ |
ಧರುಮ ಸತ್ರಕೆ ಭರ್ಗ ಮುಖ್ಯರ | ಕರೆಯಬೇಕು || 116 ||
ಎಂದು ನುಡಿದಾ ನಿರ್ಜರಾಧಿಪ |
ನಂದಿವಾಹನನನ್ನು ಕರೆತರ |
ಲೆಂದು ಬಂದನು ರಜತ ಪರ್ವತ | ಕಂದು ಬೇಗ || 117 ||
ಪತಿತ ಪಾವನ ಪುರವಿನಾಶನ |
ಚತುರತೆಯ ಗತಿ ಲಾಸ್ಯ ತಾಂಡವ |
ವತಿ ವಿನೋದದೊಳಿರ್ದ ಗಿರಿಯೊಳು | ಸತಿಯ ಸಹಿತ || 118 ||
ಕ್ಷೇಮವೇಂ ಸುರಪಾಲ ಮುಖ್ಯರೆ |
ಪ್ರೇಮ ಭಾವದಿ ಬಂದುದೇತಕೆ |
ನೇಮ ಮುರಿದರೆ ರಾಕ್ಷಸರು ಬಲು | ತಾಮಸದಲಿ || 119 ||

**ಕೇದಾರಗೌಳ - ಅಷ್ಟ**
ಕರುಣಾಬ್ಧಿ ಕೇಳು ತ್ರಿವೇಣಿ ಸಂಗಮದಲ್ಲಿ |
ಧರುಮ ಸತ್ರವ ಕೈಗೊಂಡು ||
ಕರೆವರೆ ಬಂದಿಹೆವಧ್ಯಕ್ಷರಾಗುತ |
ಹರಸುವುದೆಮ್ಮನೆಲ್ಲ || 120 ||
ವಾಸವ ಕೇಳಯ್ಯ ತೋಷವಾಂತೆನು ನಾನು |
ಆಶಯವಿದು ಸೊಗಸು ||
ಭಾಷಿಪುದಿದಕೇನು ಏಳಿಪೋಗುವಯೆಂದ |
ದೋಷನಿವಾರಕನು || 121 ||

**ಕಾಂಬೋಧಿ - ಝಂಪೆ**
ಬ್ರಹ್ಮ ಮಾನಸಪುತ್ರ ದಕ್ಷನಾ ದಿನದಲ್ಲಿ |
ದಿಮ್ಮನೆದ್ದನು ಸತ್ರಕೆನುತ ||
ಒಮ್ಮೆ ನಾ ತೆರಳಿದರೆ ಮನ್ನಣೆಯು ದೊರೆಯುವುದು |
ಹಮ್ಮುಬಿಮ್ಮಿಗೆ ಕೊರತೆಯಿರದು || 122 ||
ವಾಸವಾದ್ಯರು ಸೇರಿ ಸಂಗಮದಲ್ಲಿ |
ದೋಷಮರ್ದನನೀಶನನ್ನು ||
ತೋಷದಿಂದಧ್ಯಕ್ಷ ಪದವಿಯಲಿ ಕುಳ್ಳಿರಿಸಿ |
ಆಶಿಸಿದರೆಲ್ಲರಿಗೆ ಶುಭವ || 123 ||

**ಭಾಮಿನಿ**
ಇಂದುಶೇಖರನಾ ಸಭಾಪತಿ |
ಎಂದು ಗೌರವವೀಯುತಾಕ್ಷಣ |
ಸಂದಿರುವ ಸಭೆಗಾಗಿ ಜವದಲಿ ದಕ್ಷನೈತಂದ ||
ಕುಂದು ಬರದಿರಲೆಂದು ಸುಮನಸ |
ವೃಂದವೆದ್ದಾದರದಿ ಸ್ವಾಗತ |
ವಂದನೆಯನೀಯಲ್ಕೆ ಭರ್ಗನು ಕುಳಿತಿಹುದ ಕಂಡು || 124 ||

**ಸೌರಾಷ್ಟ್ರ - ತ್ರಿವುಡೆ**
ಸುತ್ತ ನೋಡುತ ದಕ್ಷ ತಾ ಖತಿ |
ವೆತ್ತು ನುಡಿದನು ಪೂರ್ಣ ಗೌರವ |
ವಿತ್ತ ಸಭೆಯನು ಮೀರ್ದನೀಶನು | ಮತ್ತನಾಗಿ || 125 ||
ಈಶ ತಾನಿಹೆನೆಂಬ ಮದದಾ |
ಪಾಶ ಬಿಗಿದಿದೆ ದೇಹವಂ ಪರಿ |
ಹಾಸ ಗೈವನೆ ಎನ್ನನೀತನು | ರೋಷವಹುದು || 126 ||
ಏಳದಿರ್ದೊಡೆ ಕುಳಿತು ಕೊಳ್ಳಲಿ |
ಪೇಳುತುಚಿತದ ಮಾತನಾಡನು |
ನಾಲಿಗೆಗೆ ಗರ ಬಡಿಯಿತೇನದು | ತಾಳಲೆಂತು || 127 ||
ಪದ್ಮಪೀಠನ ಮಾತಮೀರದೆ |
ಮುದ್ದು ಕುವರಿಯನಿತ್ತೆನಿವನಿಗೆ |
ಶುದ್ಧ ಮರ್ಕಟ ಕರದ ಮಾಲೆ ವಿ | ರುದ್ಧವಾಯ್ತು || 128 ||
ಸ್ನಾನ ಜಪತಪ ನೇಮವಿಲ್ಲ ಸ್ಮ |
ಶಾನ ವಾಸವು ಭಸ್ಮಲೇಪನ |
ಲೀನ ಭೂತ ಪಿಶಾಚ ಬಳಗದಿ | ಹೀನನೈಸೆ || 129 ||
ಉಸುರಲೇನನು ಮಾಂಸಹಾರಿಗ |
ಳಸುರ ಪಾಷಂಡಿಗಳ ದೇವರು |
ವಸುಧೆಗಗ್ಗದ ವರಪ್ರದಾತನು | ಅಸಹನೀಯ || 130 ||
ಏಕೆ ಬಂದೆನು ಪಾತಕಿಗಳಿಹ |
ಕಾಕು ಸ್ಥಳವೆಂದಾಗ ಸಭೆಯನು |
ನೂಕಿ ತನ್ನಿಷ್ಟದೊಳು ಪೊರಟ ವಿ | ವೇಕ ತೊರೆದು || 131 ||

**ಕಾಂಬೋಧಿ - ಅಷ್ಟ**
ನಗುತೆಂದ ಪರಶಿವನಾಗ | ಕರೆದು |
ಮಘವ ಮುಖ್ಯರೊಳು ಸರಾಗ ||
ಜಗದಲ್ಲಿ ಗೌರವ ಮನ್ನಣೆ ಇವಗಿಷ್ಟ |
ಲಘುವಾಗಿ ನುಡಿವನು ಹೋಗಲಿ ಬಿಡಿಬಿಡಿ || 132 ||

**ವಾರ್ಧಕ**
ಆದುದಂ ಮರೆತೆಲ್ಲ ಮುಂದರಿಯಿರೆಂದೆನಲು |
ಸಾದರದಿ ಕಾರ್ಯಗಳ ಸಂಪೂರ್ಣವಂ ಗೊಳಿಸೆ |
ಹ್ಲಾದಿನೀಧರ ಮುಖ್ಯರನು ಬಿಟ್ಟು ಶಿವನು ಪೊರಮಟ್ಟ ರಜತಾದ್ರಿಗೆನುತ ||
ಆ ದಿನದಿ ನಡೆದುದಕೆ ದಕ್ಷ ತಾ ಕುದಿದೆದ್ದ |
ಆದರವ ತೋರದಿಹ ಶಂಕರನ ಮದವನ್ನು |
ಶೋಧಿಸುವೆನೆನುತಾಗ ಬ್ರಹ್ಮನಲಿ ದೂರಲ್ಕೆ ಮನ್ನಿಸಿದ ಪರಿಣಾಮದಿ || 133 ||

**ಕೇದಾರಗೌಳ - ಅಷ್ಟ**
ಧರಣಿ ಮೂರರಲಿ ಪ್ರಜೇಶ್ವರತ್ವವು ವಿಧಿ |
ಕರುಣೆಯ ಕಾರಣದಿ ||
ದೆರಕಿತೆನಗಹಹ ಸರಿದೊರೆ ಯಾರಿಲ್ಲ |
ಹರನಹಂಕಾರವನು || 134 ||
ತಗ್ಗಿಪ ಮಾರ್ಗ ನಿರೀಶ್ವರ ಯಾಗವ |
ಹಿಗ್ಗಿನಿಂ ಕೈಗೊಂಬೆನು ||
ಸಗ್ಗದ ಗುರುವಿನ ಸಂತಸದಪ್ಪಣೆ |
ಜಗ್ಗನೆ ಪಡೆದಿಹೆನು || 135 ||

**ಸುರುಟಿ - ಆದಿ**
ನೇಸರ ಮೂಡುತಿರೆ | ಪೊರಟಿತು |
ಭೂಸುರ ವ್ರಾತವುರೆ ||
ದ್ವೇಷವನರಿಯದರು | ಪ್ರಾಜ್ಞತೆ |
ಭೂಷಿತ ಬ್ರಾಹ್ಮಣರು || 136 ||
ವರಮಹ ಯಾಗದಲಿ | ವಿದ್ವತ್ |
ಮೆರೆಸುವ ವಿಷಯದಲಿ ||
ಸರಸದ ಮಾತುಗಳ | ಆಡುತ |
ಸರಿದರು ದಾರಿಗಳ || 137 ||

**ಸೌರಾಷ್ಟ್ರ - ತ್ರಿವುಡೆ**
ವರದೆ ದಾಕ್ಷಾಯಿಣಿಯು ಶಿಖರದಿ |
ಸರಸದಿಂದಿರಲಂದು ಧರಣೀ |
ಸುರರ ನೋಡುತ ಕರೆಸಿ ನುಡಿದಳು | ಹರುಷವೆರೆಸಿ || 138 ||

**ತೋಡಿ - ರೂಪಕ**
ಶ್ರುತಿಯ ಸ್ಮೃತಿಯನರಿತ ಬ್ರಾಹ್ಮಣ | ಚತುರ ಮತಿಯ |
ವಿತತಿಗೂಡಿ ಪೋಪಿರೀಕ್ಷಣ ||
ಸತಿಯ ಸುತರ ಸೇರಿಕೊಂಡು | ಸ್ಥಿತಿಯ ಕುರಿತು ಸತತ ವಿಷಯ |
ಮಥನ ಮಾಡುತಿಂತು ಪೊರಟ | ಕಥೆಯದೇನು ಪೇಳಿರೆನಗೆ || 139 ||

**ಶ್ರೀ - ಏಕ**
ಯಾಗೋದ್ದೇಶಕೆ ನಾವೆಲ್ಲರು ಬಲು |
ವೇಗದಿ ಪೊರಟಿಹೆವು ||
ಯೋಗವ ಬಣ್ಣಿಪ ನಾಲಿಗೆ ಸೋಲ್ವುದು |
ಬೀಗುವ ವಿಷಯವಿದು || 140 ||
ದಕ್ಷನು ಮಾಡುವ ಯಜ್ಞದ ವೈಭವ |
ವೀಕ್ಷಿಪ ಕಾತರವು ||
ಭಿಕ್ಷಕೆ ಲಕ್ಷ್ಯವೆ ಲಕ್ಷಕು ಮೀರಿದ |
ದಕ್ಷಿಣೆ ದೊರೆಯುವುದು || 141 ||
ಪರಿಕಿಸಲವರ ಕುಮಾರಿಯು ನೀವಿರೆ |
ಕರೆಯಿಲ್ಲವೆ ನಿಮಗೆ ||
ಮರೆತಿರಬಹುದಾ ಕಾರಣ ಬನ್ನಿರಿ |
ತೆರಳುವ ನಾವೀಗ || 142 ||
ಸತಿದೇವಿಯು ತಾ ಕೇಳುತಲೆಂದಳು |
ಪೃಥುವಿಸುರರೆ ನಾನು ||
ಅತಿ ಸಂತೋಷದ ಸಂಭ್ರಮದಿಂದಲಿ |
ಪತಿಯ ಜತೆಗೆ ಬರುವೆ || 143 ||

**ಘಂಟಾರವ - ರೂಪಕ**
ಪೃಥ್ವಿಯಮರರ | ನುಡಿಯ ಕೇಳುತ ||
ನಿತ್ಯ ಮಂಗಲೆ | ನೋಯುತೆಂದಳು || 144 ||
ಅಮಮ ಚೋದ್ಯವು | ತವರು ಮನೆಯಲಿ ||
ಅಮಿತ ಸಂಭ್ರಮ | ಯಜ್ಞಕಾರ್ಯವು || 145 ||
ಬಂಧು ಬಳಗವು | ಇಷ್ಟಮಿತ್ರರು ||
ಬಂದು ಸೇರ್ವರು | ಹೊರತು ಯೆನ್ನನು || 146 ||
ಕರೆಯೆ ಮರೆತರೆ | ಕಾರ್ಯಭರದಲಿ ||
ಅರಸಗರುಹುತ | ತೆರಳುವುದೆ ಸರಿ || 147 ||
ಮನದಿ ಯೋಚಿಸಿ | ಪತಿಯ ಪಾದಕೆ ||
ವಿನಯ ಪೂರ್ವಕ | ಎರಗುತೆಂದಳು || 148 ||

**ಆರಭಿ - ರೂಪಕ (ಪೂರ್ವಿ - ಅಷ್ಟ)**
ಜೀವಿತೇಶ ನೋಡಿ ಪೋಪ ವಿಪ್ರವರ್ಗವ | ನಿಮ್ಮ |
ಮಾವ ಮಾಳ್ಪ ಯಾಗವಂತೆ ಆ ವಿನೋದವ ||
ಸೋವ ತಿಳಿದು ತಾಳದೆನ್ನ ಮನವು ಪೋಗದೆ | ನಾನು |
ನೀವು ಕೂಡಿ ತೆರಳುವಂಥ ಬಯಕೆ ಮೂಡಿದೆ || 149 ||

**ಸುರುಟಿ - ಏಕ**
ಅಧಿಕೋತ್ಸಾಹವಿದು | ಉತ್ಸವ |
ವಿದ ನೀ ಮರೆಯುವುದು ||
ಚದುರೆ ನಿಮಂತ್ರಣ ವದಗದೆ ಪೋಪುದು |
ಹೃದಯಾಂತರ್ಗತ ಮುದದ ವಿಚಾರವೆ || 150 ||

**ಮಧುಮಾಧವಿ - ತ್ರಿವುಡೆ**
ಅರುಹದಿರ್ದರು ರಾಜನರಮನೆ |
ಗುರುವು ರಮಣನ ಮನೆಗೆ ತವರಿಗೆ |
ತೆರಳಬಹುದೆಂದಿರುವ ವಚನವು | ಅರಿಯದೇನೈ ನಿಮಗಿದು || 151 ||

**ಸಾಂಗತ್ಯ - ರೂಪಕ**
ಅಕ್ಕತಂಗಿಯರೆಲ್ಲ ಸೊಬಗಿನೋಳ್ ಸೇರಿರೆ |
ನಕ್ಕು ನಲಿಯುವಂಥ ಬಯಕೆ ||
ಮಿಕ್ಕಿದ ಸಂಪದ ರಮಣನೊಳಿದ್ದರ್ಹೆ |
ಮಕ್ಕಳ್ಗೆ ತವರಾಸೆ ಸಹಜ || 152 ||

**ಸುರುಟಿ - ಏಕ**
ಹಿಂದಿನ ಕಥೆಯನ್ನು | ಕೇಳ್ಪತಿ |
ಅಂದಿನ ಪರಿಯನ್ನು ||
ವೃಂದದ ಹಿರಿಮೆಯ ಚೆಂದದಿ ವಹಿಸಿರೆ |
ಬಂದಿಹ ದಕ್ಷನ ಅಂದೆಣಿಸದಿರೇ || 153 ||

**ಖಮಾಚು - ಏಕ**
ಏಳದಿರ್ದುದ ಕಂಡು ದಕ್ಷ ತಾ ಖತಿಗೊಂಡು |
ಪೇಳಿದ ಬಿರು ಮಾತು ಕೇಳಿ ಸೈರಿಪುದೆಂತು ||
ತಾಳಿ ದ್ವೇಷದಿ ಗೈವ ಯಾಗಕ್ಕೆ ಪರಿಭಾವ |
ಕೇಳು ನಾ ಪೋಗೆನು ಗೊಡವೆಯ ಬಿಡು ನೀನು || 154 ||

**ಭಾಮಿನಿ**
ಎಸೆವ ಯಜ್ಞವು ದೋಷಪೂರಿತ |
ಉಸುರದಿರ್ದರು ಪೋದೆವಾದರೆ |
ರಸಿಕನಲ್ಲದನೆದುರು ಕವಿತೆಯನುಸುರಿದಂತಹುದು ||
ಬೆಸುಗೆಯಾಗದು ಯೆಮಗು ದಕ್ಷಗು |
ಸುಷುಮೆ ಯಾಗ ವಿಚಾರ ಬಿಡೆನುತ |
ತುಸು ಕಿನಿಸಿನಿಂ ನುಡಿಯೆ ಕಂಬನಿಗರೆದು ಸತಿಯಾಗ || 155 ||

**ಸಾರಂಗ - ತ್ರಿವುಡೆ**
ಮೌನವಾಂತಿರೇ ರಮಣ | ತೊರೆದು ಕರುಣ |
ಸ್ಥಾಣೂ ಪನ್ನಗ ಭೂಷಣ || ಪ ||
ಮೌನವಿದ ನಾನೆಂತು ಸಹಿಸಲಿ |
ಸಾನುರಾಗದಿ ಬಂದು ಸೇರುವ |
ನ್ಯೂನವಿಲ್ಲದ ಬಂಧು ಬಳಗವ |
ಕಾಣ ಬೇಕೆಂಬಾಸೆ ಸಹಜವು || ಅ.ಪ. ||
ತಾಳದೆನ್ನಯ ಮನವು | ಇಂದಿದ್ದಲ್ಲಿ |
ನಾಳೆ ಬಹೆನು ನಿಜವು ||
ಆಲಯದಿ ಪಿತ ತಾನು ತನ್ನಯ |
ಬಾಲೆಯಾದಳ ಮನ್ನಿಸದೆ ಬಿಡ |
ಕಾಲಕಾಲನೆ ಪೋಗದುಳಿದರೆ |
ಕೇಳದೆನ್ನಯ ಮನದ ನಿಜಸ್ಥಿತಿ || 156 ||

**ನಾದನಾಮಕ್ರಿಯೆ - ಅಷ್ಟ**
ಮೌನ ಸಮ್ಮತಿಯೆನ್ನುತಾಗಲೆ | ಗೌರಿ |
ತಾನೆ ಮನದಿ ನಿಶ್ಚೈಸುತ್ತಲೆ ||
ಆನನವೆತ್ತಿ ಮುದ್ದಿಡುತಾಗ | ಈ |
ತಾಣವ ಬಿಡುವೆನೆನ್ನುತ ಬೇಗ || 157 ||

ಪೀಠವಿಳಿದು ದ್ವಾರದೆಡೆ ಬಂದು | ನೋಡೆ |
ನೋಟದ ನಿರ್ಲಿಪ್ತತೆಯ ಕಂಡು ||
ದಾಟುವುದುಚಿತವಲ್ಲೆನುತಾಗ | ಮನ |
ಮೀಟೆ ತಾ ತಿರುಗಿ ಮೂಲಕೆ ಬೇಗ || 158 ||
ತಾಯಿಯ ಕಾಣುವ ಕಾತರ | ನೀವು |
ನೋಯದೆ ಕಳುಹೆನ್ನ ಶಂಕರ ||
ಕಾಯವಲ್ಲಿದ್ದರೆನ್ನಯ ಮನ | ಇಲ್ಲಿ |
ಸ್ಥಾಯಿಯಾಗಿರುವುದವಿಚ್ಛಿನ್ನ || 159 ||
ಬಾಗಿ ಪಾದಕೆ ವಂದಿಸಿ | ನಾನು |
ಹೋಗುವೆನೆಂದಭವನರಸಿ ||
ಯೋಗವ ನೆನೆದು ಚಿಂತಿಸುವಳು | ಹೇಗೆ |
ಸಾಗುವೆನೆಂದು ಯೋಚಿಸುವಳು || 160 ||

**ಕಂದ**
ಪ್ರೀಯನೊಲುಮೆಯಂ ಗಳಿಸಲು |
ಆಯತದಳನೇತ್ರೆ ಸೋತು ಬಂಧು ನಿಚಯವಂ ||
ಪ್ರೀಯದಿ ನೋಡುವೆನೆಂದು ನಿ |
ಕಾಯವ ಬಿಟ್ಟಾಗ ಪೊರಟು ನಿಂದಳವಳು ತಾಂ || 161 ||
ಪುರಹರ ನೋಡುತಲಾಗಳ್ |
ಕರೆದಂ ನಂದಿಪ್ರಮಥಾದ್ಯರಂ ಕಳುಹಿಸಿದಂ ||
ಹರನಾಜ್ಞಾಪಿಸಲಾಕ್ಷಣ |
ಹರಗಣ ಮಾತೆಯನು ಪೊರೆಯೆ ಪೊರಟಿತು ಬೇಗಂ || 162 ||

**ವೃಂದಾವನ ಸಾರಂಗ - ಅಷ್ಟ**
ಕೇಳಿರಿ | ಮುಂಗಥೆ | ಕೇಳಿರಿ || ಪ ||
ನೀಲಕಂಧರನ ಮಡದಿ ಪೋಪ ಬಗೆಯನು || ಅ.ಪ. ||
ಗೌರಿಯಾಕ್ಷಣ ನಡೆತಂದಳು | ಪಾಲಕಿ |
ಯೇರುತ ಇನಿಯನ ನೆನೆವಳು || ಜತೆ |
ನೀರನಿಲ್ಲವು ನೋಯುತೆಂಬಳು | ಈ |
ದಾರಿ ಸಾಗದಿದೇತಕೆಂಬಳು ||
ಮನದಿ | ಹಿಗ್ಗುತ | ಬುದ್ಧಿಯಿಂ | ಕುಗ್ಗುತ ||
ಬಾರಿ ಬಾರಿಗು ತಿರುತಿರುಗಿ ಕಾಂಬಳು || ಬೇರೆ |
ಬೇರೆ ಯೋಚನೆಯೊಳ್ ತೊಡಗುವಳು || 163 ||

**ಸೌರಾಷ್ಟ್ರ - ತ್ರಿವುಡೆ**
ಸಾವಧಾನದೊಳೆಸಗುತಿರುವಾ |
ಭಾವ ಚೋದಿತ ಮಂತ್ರತಂತ್ರವು |
ಈವಿಧಾನದ ನೂತನಾಧ್ವರ | ಭೂ ವಲಯಕೆ || 164 ||
ಕಂಡು ಭಾವಕಿ ಕುಗ್ಗುತೆಂದಳು |
ದಿಂಡನಾದನೆ ಪಿತನು ಮದದಲಿ |
ಚಂಡ ಛಲದಾ ಯಜ್ಞ ರೀತಿಯ | ಕಂಡರಿವೆನೂ || 165 ||

**ಶ್ರೀ - ಏಕ**
ಪೂರ್ವದಿ ಮಘವಾಗ್ನೇಯದೊಳಗಿಗೆ |
ಗೀರ್ವಾಣರಿಗಲ್ಲಿ ||
ಹೀರ್ವರೆ ಹವಿಗಳನಿತ್ತುದ ಕಂಡಳು |
ಶರ್ವನ ಭಾಗವನು || 166 ||
ಈಶನಿಗೀಯುವ ಹವಿಗಳ ಭಾಗವ |
ದ್ವೇಷದಿ ಕೊಡದಿಹರೆ ||
ರೋಷಾವೇಷದೊಳೆಸಗಿದ ಕಾರ್ಯವು |
ದೋಷ ಸನಾತನಕೆ || 167 ||

**ಜಂಜೂಟಿ - ರೂಪಕ**
ಅರರೆ ಏನಿದೆನ್ನ ಪಿತ ವಿವೇಕ ಶೂನ್ಯನೆ |
ಹರಗೆ ಹವಿಯ ನೀಡದಂತೆ ಯಾಗಗೈವನೆ ||
ಹಿರಿಯರನ್ನು ನೋಳ್ಪ ಬಯಕೆಯಿಂದ ಬಂದೆನು |
ಭರಿತ ಪ್ರೀತಿಯೊರತೆ ಕೊರತೆಯನ್ನು ಕಂಡೆನು || 168 ||

ಪತಿಯ ಮಾತ ಮೀರಿದುದಕೆ ಕ್ರಮ ವಿಹೀನದ |
ಕ್ರತುವ ನೋಳ್ಪ ಶಿಕ್ಷೆಯಾಯ್ತು ಮರೆಯಲೇನದ ||
ಪಿತನು ಮಾತೆ ದೇವ ವ್ರಾತ ತೊರೆದರಾದರ |
ವ್ಯಥಿಸಲೇನು ಶಿವನ ವೈರ ನರಕಕಾಸರ || 169 ||

**ಕಾಂಬೋಧಿ - ಝಂಪೆ**
ಭೃಗು ಭಗನೆ ಮುಂತಾದ ವಿಗಡ ಮುನಿ ನಿಕರ ಮೇಣ್ |
ಅಗಡುತನದಿಂ ಸುರರು ನಗಲು ||
ಬಗೆಯರಿತ ಸತಿದೇವಿ ನಗುತಿರುವ ಸಭೆ ನೋಡಿ |
ತೆಗಳುತೆಂದಳು ಪಿತನ ಕುರಿತು || 170 ||

**ಭೈರವಿ - ಏಕ**
ದುರ್ಮತಿ ದಕ್ಷನೆ ಕೇಳೂ | ನಿನ |
ಕರ್ಮವನುಂಬೆಯ ತಾಳೂ ||
ಧರ್ಮವ ನಿರ್ಲಕ್ಷಿಸಿದೆ | ಬಲು |
ವರ್ಮವ ಸಂರಕ್ಷಿಸಿದೆ || 171 ||
ಕಾಲಾಂತಕನ ವಿರೋಧ | ಸರಿ |
ಹೋಲಿಕೆ ಮೃತ್ಯು ವಿನೋದ ||
ಬಾಲಿಶ ಬುದ್ಧಿಯ ಸುರರೆ | ಆ |
ಶೂಲಿಯು ಶಿಕ್ಷಿಪನರರೆ || 172 ||
ತನುಜೆಯ ಶಂಕರಗಿತ್ತೆ | ಎಂ |
ದೆನುತಲಿ ಜಂಭವ ಹೊತ್ತೆ ||
ಘನ ಬೆಲೆಯನು ನೀ ತೆರುವೆ | ಈ |
ತನುವನು ಕೊನೆಗಾಣಿಸುವೆ || 173 ||
ನೀ ಹಡೆದೀ ಕಾಯವಿದು | ಪತಿ |
ನೋಹಿಗೆ ಮಲಿನತೆಯಹುದು ||
ದೇಹದಿ ಶಿವಗುಪಚಾರ | ಕ್ರಮ |
ಬಾಹಿರವಾದ ವಿಚಾರ || 174 ||
ಯೋಗದೊಳಗ್ನಿಯ ಸೃಜಿಸಿ | ಆ |
ನಾಗಾಭರಣನ ನೆನೆಸಿ ||
ವೇಗದಿ ದಹಿಸುತ ತನುವ | ತಾ |
ಸಾಗಿದಳಾ ಶಿವಪದವ || 175 ||

**ಭಾಮಿನಿ**
ಒಡತಿಯಾಹುತಿ ಕಂಡು ಪ್ರಮಥರು |
ಒಡನೆ ಕೋಪದಿ ಯಾಗ ಮಂಡಪ |
ಸುಡುಸುಡೆನುತಲಿ ಒಳಪ್ರವೇಶಿಸಿ ಧ್ವಂಸಗೈಯುತಿರೆ ||
ಕೆಡುಕ ಕಂಡಾ ಭೃಗುಮುನೀಶ್ವರ |
ತಡೆದು ದಿಗ್ಬಂಧನವ ವಿರಚಿಸೆ |
ನಡುಗಿತಾ ಪ್ರಮಥಾದಿ ಹರಗಣ ಸ್ಥಂಬಿಸುತ್ತಾಗ || 176 ||

**ಸಾಂಗತ್ಯ - ರೂಪಕ**
ಪ್ರಾಯಶ್ಚಿತ್ತಾದಿ ಹೋಮವ ಗೊಂಡಾ ದಕ್ಷನು |
ನೋಯದೆ ಯಾಗ ಕರ್ಮಗಳ ||
ಆಯದಿ ಮುಂದುವರಿಸುತಿರೆ ನಾರದ |
ತೋಯಜಾಕ್ಷನ ಮಿತ್ರನಿಂಗೆ || 177 ||
ಉಸುರುವೆನೆನ್ನುತ ಮಹದೇವ ಸಲಹೆಂದು |
ವಿಷಕಂಠಗೊಂದಿಸುತ್ತಿರಲು ||
ಶಶಿಧರ ಮನ್ನಿಸಿ ನಾರದಮುನಿಯನ್ನು |
ಬೆಸಗೊಂಡ ತನ್ನಿರವಾಗ || 178 ||

**ಕೇದಾರಗೌಳ - ಝಂಪೆ**
ಮುನಿಪ ನಾರದನೆ ಕೇಳು | ಎನ್ನರಸಿ |
ಜನಕನಲ್ಲಿಗೆ ಪೋದಳು ||
ತನುಜೆಯನು ಮನ್ನಿಸಿದನೆ | ತೊರೆದನೇಂ |
ಅನುವ ನೀ ತಿಳಿದರುಹೆನೆ || 179 ||

ದೇವ ದೇವನೆ ತಿಳಿಯೆಯಾ | ನಿನ್ನ ಸತಿ |
ದೇವಿ ಗೈದಿಹ ಕಾರಿಯ ||
ಕೋವಿದೆಯ ಮನ್ನಿಸದಿರೆ | ತನುವನ್ನು |
ಪಾವಕಗೆ ಅರ್ಪಿಸುತಿರೆ || 180 ||

**ಸೌರಾಷ್ಟ್ರ - ತ್ರಿವುಡೆ**
ನಾರದಾಂಕನು ಪೇಳ್ದ ಮಾತನು |
ಗೌರಿಕಾಂತನು ಕೇಳುತಾಕ್ಷಣ |
ಭಾರಿ ಕ್ರೋಧವ ತಾಳಿ ಹಳಿದನು | ಕ್ರೂರತನವ || 181 ||
ಪ್ರಳಯವಾಗಲಿ ಬಿಡೆನು ವಿಶ್ವವ |
ಕಲಹ ಕಾರಣ ಗುಣ ಸ್ವಭಾವದ |
ಕಲುಷ ಮನದಾ ವ್ಯಕ್ತಿನಿಷ್ಠುರ | ತುಳಿವೆನೀಗ || 182 ||
ಜಲಜಸಂಭವ ಸುರಪ ಮುಖ್ಯರು |
ನಿಲುತ ದಕ್ಷನ ಯಾಗ ಕಾರ್ಯಕೆ |
ಮಲೆತು ಸಹಕಾರವನು ಕೊಟ್ಟರು | ಬಲಿತ ಮದದಿ || 183 ||
ದಂಡಿಸದೆ ಬಿಡೆನೆಂದು ತನ್ನಯ |
ಮಂಡೆ ತುಡುಕುತ ಜಟೆಯ ಬಡಿಯಲು |
ಕಂಡು ಕೇಳರಿಯದಿಹನುದಿಸಿದ | ಗಂಡುಗಲಿಯು || 184 ||
ಹುಟ್ಟಿದನು ಭೀಕರದ ದೇಹದಿ |
ಸಿಟ್ಟು ಮೂರ್ತೀಭವಿಸಿದಂತೆಯೆ |
ಅಟ್ಟಹಾಸದಿ ಕಂಗೊಳಿಸಿದನು | ಥಟ್ಟನಲ್ಲಿ || 185 ||

**ಮಾರವಿ - ಏಕ**
ಸೃಷ್ಟಿಯೊಳೆನ್ನನು ಸೃಷ್ಟಿಸಿದೇತಕೆ |
ಸೃಷ್ಟೀಶನೆ ಪೇಳು ||
ಕೊಟ್ಟಪ ಕಾರ್ಯವ ಥಟ್ಟನೆ ಮಾಡಲು |
ತೊಟ್ಟಪೆ ದೀಕ್ಷೆಯನು || 186 ||

**ಕೇದಾರಗೌಳ - ಝಂಪೆ**
ಮುದ್ದು ಕಂದನೆ ಬಾರೆಲೊ | ಸಂಕ್ಲೇಶ |
ಸುದ್ದಿಯನು ನೀ ಕೇಳೆಲೊ ||
ಶುದ್ಧ ಮೂರ್ಖನು ದಕ್ಷನು | ಧರ್ಮ ವಿ |
ರುದ್ಧ ಕಾರ್ಯವ ಗೈದನು || 187 ||
ಬಿಡು ಜನಕ ಯೋಚನೆಯನು | ದಕ್ಷನೇನ್ |
ಕಡುಗಲಿಯು ತಿಳಕೊಂಬೆನು ||
ತಡೆಯದೇ ಸಹಕಾರವ | ಕೊಟ್ಟವರ |
ಬಡಿದಪೆನು ನಡು ಹಾಯ್ವರ || 188 ||

**ಸೌರಾಷ್ಟ್ರ - ತ್ರಿವುಡೆ**
ಅರಿ ಭಯಂಕರ ವೀರಭದ್ರನೆ |
ತರಿಯೊ ಧರ್ಮ ವಿರೋಧಿ ಮೊತ್ತವ |
ಜರಿಯೊ ಸೊಕ್ಕಿನ ಸುರಪ ಮುಖ್ಯಾ | ಮರರ ಬಿಡದೆ || 189 ||

**ತೋಡಿ - ತ್ರಿವುಡೆ**
ಈಶನಾಜ್ಞೆಯ ಶಿರದಿ ಪೊತ್ತಾ |
ಭೀಷಣಾಕೃತಿ ವೀರಭದ್ರನು |
ದೋಷರಹಿತನ ಪದಕೆ ವಂದಿಸುತ ||
ನಾಶ ಕಾಲದ ಪರಮಶಿವನಾ |
ವೇಶದಿಂ ಗುಡುಗುಡಿಸಿ ಭುವಿಯಾ |
ಕಾಶ ಸೇರಿಸುವಂತೆ ಪೊರಮಟ್ಟ || 190 ||
ಯಾಗ ಶಾಲೆಯೊಳಗೆ ಕುಳಿತ ಶತ |
ಯಾಗ ಮುಖ್ಯರು ನೋಡಿ ಗಜರುತ |
ತಾಗಿ ತಡೆದರು ವೀರಭದ್ರನನು ||
ಆಗ ಮಾರುತ ಸಮರಗೈಯಲು |
ಸಾಗದಾಗಿ ಕುಬೇರ ಸೋತಿರೆ |
ತೂಗುತಾಯುಧವಗ್ನಿ ತಡೆದೆಂದ || 191 ||

**ಮಾರವಿ - ಏಕ**
ಅಮಮ ಪವಿತ್ರದ ಅಧ್ವರಶಾಲೆಯ |
ಸಮರಾಂಗಣ ಗೈದೆ ||
ಭ್ರಮೆಯನು ತೊಲಗಿಪೆನೆನುತಲಿ ಬಾಣವ |
ಕ್ರಮಶಃ ತೆಗೆದೆಚ್ಚ || 192 ||
ಮಾತುಗಳೇತಕೊ ವಿಭ್ರಮೆ ತುಂಬಿದೆ |
ಜಾತವೇದ ನಿನಗೆ ||
ಭೂತಪತಿಯ ಹೊರತಾಗಿಹ ಯಜ್ಞವ |
ಘಾತಿಪೆನೀಕ್ಷಣದಿ || 193 ||
ಉರಿಯುಗುಳುತ ಸಪ್ತಾರ್ಚಿಯು ಭದ್ರನ |
ಶಿರಕೆರಗಿದನಾಗ ||
ತರಳನ ಹೂಂಕಾರಕೆ ಬೆದರಿದನಲ |
ಸರಿದರೆ ಸುರಪಾಲ || 194 ||

**ಕಲ್ಯಾಣಿ - ಮಟ್ಟೆ**
ಬಿಟ್ಟ ಮಂಡೆ ಭೀಕರಾಕೃತಿ | ಕೆಂಗಣ್ಣು ಕೋರೆ |
ಸಿಟ್ಟು ಸೆಡವು ರೌದ್ರಮೂರುತಿ ||
ಧೃಷ್ಟ ದೇಹದಿಂದ ಕೂಡಿ | ನಷ್ಟಗೈವೆ ಯಾಗಗಳನು |
ಕಷ್ಟಕೊಡುವೆ ಸಾಧು ಮುನಿಗಳ | ಹಿಂಸಿಸುವ ಧೈರ್ಯ |
ಕೊಟ್ಟ ಮಹಿಮನಾರು ಪೇಳೆಲಾ || ಶೌರ್ಯಾಧಿಪತಿ ನಾ |
ಕುಟ್ಟಿ ಕಳೆವೆ ನಿನ್ನ ತಿಳಿಯೆಲಾ || 195 ||
ಈಶನಿಂಗೆ ಹವಿಯ ನೀಡದೆ | ಆಕ್ರೋಶದಿಂದ |
ದೋಷಪೂರ್ಣ ಯಾಗ ಗೈವುದೆ ||
ದ್ವೇಷವಾಂತ ಕಾರ್ಯವನ್ನು | ಹೇಸದಂತೆ ಗೈದುದಕ್ಕೆ |
ನೀ ಸಹಾಯಮಾಳ್ಪುದೀತೆರ | ಅಪರಾಧಿಗಳನು |
ಘಾಸಿಮಾಡಲೆಂದು ಶಂಕರ | ಜಟೆಯಿಂದಲೆನ್ನ |
ಲೇಸಿನಿಂದ ಪಡೆದ ಶುಭಕರ || 196 ||

**ಭೈರವಿ ಏಕತಾಳ**
ಮಂತ್ರಾಧೀನತೆ ಯೆಮಗೆ | ಸ್ವಾ |
ತಂತ್ರ್ಯ ನಕಾರದ ಬಗೆಗೆ ||
ತಂತ್ರ ತಿಳಿಯೆ ಮತಿಹೀನ | ಅನಿ |
ಯಂತ್ರಿತ ನಡೆವುದು ಸವನ || 197 ||
ಹಿಡಿತರಹಿತನೆನ್ನುವೆಯ | ಆ |
ಮೃಡನೊಡಲುರಿಯರಿತಿಹೆಯಾ ||
ಕೆಡುಗಾಲವು ನಿಜ ನಿನಗೆ | ಮದ |
ವಡರುತ ನುಡಿಯುವೆ ಹೀಗೆ || 198 ||

**ನಾದನಾಮಕ್ರಿಯೆ - ಅಷ್ಟ**
ಜಯದಾಸೆ ತೊಲಗೆ ಸ್ವರ್ಗಾಧಿಪ | ನಯವಿ |
ನಯದಿ ಪಲಾಯನ ಗೈದಿಪ್ಪ ||
ಭಯದಿಂದೋಡುವ ಮೌನಿ ವರ್ಗವ | ಶಿವ ತ |
ನಯ ಬೆನ್ನಟ್ಟುತ ಹಿಂಸೆ ನೀಡುವ || 199 ||

**ಭಾಮಿನಿ**
ಭೃಗು ಮುನಿಯ ಕಂಗಳನು ಕಿತ್ತನು |
ಭಗನ ಹಲ್ಲುಗಳನ್ನು ಕಳಚಿದ |
ವಿಗಡರಿವರೆಂದಾ ಮುನಿ ವಿತತಿಯಂ ಪ್ರವೇಶಿಸಿದ ||
ಅಗಡುಗಳನೆಳೆದಾಡಿ ಹಿಂಸಿಸಿ |
ಬಗೆಬಗೆಯ ಸೋಪಸ್ಕರವ ತಿಂ |
ದುಗಿಯುತಿರಲಾ ದಕ್ಷ ಕಂಡದ ಗರ್ಜಿಸುತಲೆಂದ || 200 ||

**ಘಂಟಾರವ - ಅಷ್ಟ**
ನಿಲ್ಲು ಮೂರ್ಖನೆ ಘನತರ ಯಾಗವ |
ಭಿಲ್ಲನಂದದಿ ನಾಶಗೈವೆಯ |
ಖುಲ್ಲ ನಿನ್ನನು ಶಿಕ್ಷಿಪೆ || 201 ||

ಎಲವೋ ದಕ್ಷ ನಿರೀಶ್ವರ ಯಾಗವ |
ಛಲದಿ ಮಾಳ್ಪೆಯ ಆದ್ಯ ಧರ್ಮಕೆ |
ಕಲುಷ ಕಾರಣ ಕಾರ್ಯವು || 202 ||
ನೀತಿ ಪೇಳ್ವೆಯ ಧರ್ಮ ಸನಾತನ |
ಮಾತ ತಿಳಿದೂ ಮೌನಿ ವರ್ಗವ |
ಘಾತಿಸಿರ್ಪುದು ಯೇತಕೋ || 203 ||

**ಮಾರವಿ - ಏಕ**
ಶಿವನ ವಿರೋಧದ ಕಾರ್ಯಕೆ ಸಹಕಾ |
ರವನಿತ್ತವರನ್ನು ||
ಸವರಿಪ ದೀಕ್ಷೆಯ ತೊಟ್ಟಿಹೆ ನಾ ಕೈ |
ತವ ನಡೆಯದು ಕೇಳೂ || 204 ||
ಸರಿ ಪೂರ್ಣಾಹುತಿ ಕಾಲಕೆ ಬಂದಿಹೆ |
ಉರಿಯುವ ಪಾವಕಗೆ ||
ಗರುವಿಯೆ ಈ ಕರವಾಳದಿ ನಿನ್ನಯ |
ಶಿರ ಕಡಿದರ್ಪಿಸುವೆ || 205 ||

**ಕಂದ**
ಜಗವೀವರೆಗಂ ಅರಿಯದ |
ಬಗೆಯ ಸಮರ ಸಂಘಟನೆಯು ಮೇಲಾಗುತಿರಲ್ ||
ಅಘಮರ್ಷಣನ ಮಗನು ತಾಂ |
ಮೊಗದಿರುವಿರುವಾ ಗರುವಿತ ದಕ್ಷನ ಶಿರವಂ || 206 ||

**ದ್ವಿಪದಿ**
ಕತ್ತರಿಸಿ ಹೋಮಿಸಿದ ಯಜ್ಞಕುಂಡದಲಿ |
ಬತ್ತದುತ್ಸಾಹದಿಂ ನಲಿದ ತೋಷದಲಿ || 207 ||
ಆಜ್ಞಾಪಿಸಿದ ಕಾರ್ಯ ಪೂರೈಸಿ ಪೊರಟ |
ಸುಜ್ಞಾನಿ ನೆಲೆಸಿರುವ ಕೈಲಾಸಕೆನುತ || 208 ||
ಪುರುಹೂತ ಸೇರಿಸುತ ದೇವರ್ಕಳನ್ನು ||
ಅರುಹಿದನು ವ್ಯಥಿಸುತ್ತ ಸಂಗತಿಗಳನ್ನು || 209 ||

**ಸಾಗತ್ಯ - ರೂಪಕ**
ನೋಡಿದಿರೇಂ ತ್ರಿದಶರೆ ವೀರ ಭದ್ರನು |
ಮಾಡಿದವಾಂತರಗಳನು ||
ಬೇಡ ಬೇರೆಯ ಚಿಂತೆ ಸರಸಿಜಭವನೊಳು |
ತೋಡಿಕೊಂಬುದು ಏಳಿರೆನುತ || 210 ||
ಸತ್ಯಲೋಕಕೆ ಬಂದು ಬ್ರಹ್ಮನ ಪದವನ್ನು |
ಅರ್ತಿಯೋಳ್ ಸ್ತುತಿಸುತ್ತಲೆರಗೆ ||
ಉತ್ತಮನವರನ್ನು ಮನ್ನಿಸುತಾಕ್ಷಣ |
ಎತ್ತಿ ನುಡಿಸಿದನು ದಯದಿ || 211 ||

**ಸೌರಾಷ್ಟ್ರ - ತ್ರಿವುಡೆ**
ಏನಿದೇನೈ ಸುರಪತಿಯೆ ನಿ |
ನ್ನಾನನದೊಳಾತಂಕ ತುಂಬಿದೆ |
ಶೋಣಿತವು ಹರಿವುತಿದೆ ದೇಹದಿ | ಮಾಣದುಸಿರು || 212 ||
ರಕ್ಷಿಸೆಮ್ಮನು ಸಾರಸೋದ್ಭವ |
ತ್ರ್ಯಕ್ಷನಿಂಗೆ ಹವಿಸ್ಸ ನೀಡದೆ |
ದಕ್ಷ ಮಖ ಗೈದಿರಲು ಬಂದಾ | ದಕ್ಷ ಸುತೆಯು || 213 ||
ಮನ್ನಿಸದಿರಲು ಕಂಡು ಕ್ರೋಧದಿ |
ತನ್ನೊಡಲ ಯೋಗಾಗ್ನಿಗರ್ಪಿಸೆ |
ಮುನ್ನ ಮೃಡನಿದ ತಿಳಿವುತಾಕ್ಷಣ | ಸನ್ನುತಾಂಗ || 214 ||
ಸಿಟ್ಟಿನಿಂ ಜಟೆ ಬಡಿಯೆ ಹುಟ್ಟಿದ |
ಗಟ್ಟಿ ದೇಹದ ವೀರಭದ್ರನು |
ಕಟ್ಟಳವಿಯೊಳಗೆಮ್ಮ ವರ್ಗವ | ಕುಟ್ಟಿ ಕಳೆದ || 215 ||
ಹಾನಿ ಗೈದನು ಯಜ್ಞಶಾಲೆಯ |
ಮೌನಿಗಳ ಹಿಂಸಿಸುತ ದಕ್ಷನ |
ಗೋಣ ಕೊಯ್ದುತಿ ಹೋಮಿಸಿದನಾ | ತಾಣದಲ್ಲಿ || 216 ||

ಮುಂದೆ ಮಾರ್ಗವು ಕಾಣದಂತಿದೆ |
ಅಂಧಕಾರವು ತೊಲಗುವಂದದಿ |
ಕುಂದನಳಿಸುತ ಕಾಯಬೇಕೈ | ಇಂದು ನೀವು || 217 ||

**ಭಾಮಿನಿ**
ಅಕಟಕಟ ನೀವಿಂದು ಸರ್ವಾ |
ತ್ಮಕನೊಳಗೆ ಹಗೆತನವ ಸಾಧಿಸಿ |
ಮಖವ ಮಾಡ್ವಿರೆ ಮಕ್ಕಳಾಟಿಕೆಯಾಯ್ತು ಹಾಳಾಯ್ತು ||
ಭಕುತಪ್ರೇಮಿಯ ಆಳವರಿಯುವ |
ಶಕುತಿ ನಿಮಗೆಲ್ಲಿಹುದು ತಿಳಿಯಿರಿ |
ಸಕಲವನು ಕಮಲಾಕ್ಷ ಬಲ್ಲನು ಅರಿವಿರುವುದೆನಗೆ || 218 ||

**ಕಾಂಬೋಧಿ - ಝಂಪೆ**
ಹಲುಬಿದರೆ ಏನಹುದು ಸವನ ಸಂಪೂರ್ಣವಹ |
ಕೆಲಸವನು ಕೈಗೊಳ್ಳಬೇಕು ||
ಛಲದೊಳಿಹ ಶಿವನುಗ್ರ ಕ್ರೋಧವನು ತಣಿಸಲಿಕೆ |
ತಳುವದೈದುವ ರಜತ ಗಿರಿಗೆ || 219 ||
ಜಯತು ಜಗದೀಶ ಜಯ ಭಕ್ತವತ್ಸಲ ಶಂಭು |
ಜಯ ದಿಗಂಬರ ನೀಲಕಂಠ ||
ಲಯಕರ್ತೃ ಪುರಹರನೆ ಕ್ರೋಧವನು ತ್ಯಜಿಸುತ್ತ |
ದಯೆ ದೋರಿ ರಕ್ಷಿಸೆಮ್ಮನ್ನು || 220 ||
ಕ್ರೋಧವನು ಬೆಳೆಸುವಹ ಧ್ಯೇಯಂಗಳೆನಗಿಲ್ಲ |
ಬಾಧಿಸಿತು ಭೇದವೆಣಿಸಿದರ ||
ಆದುದನು ಬಿಡಿರಲ್ಲಿ | ಮೊದಲಿದ್ದ ತೆರನಂತೆ |
ಗೈದಪುದು ತೆರಳಿರೆಂದಾಗ || 221 ||
ಕಂಜಭವ ಸುರಪ ಮುಖ್ಯಾಮರರು ಸದ್ಭಕ್ತ |
ಸಂಜೀವರೊಂದಾಗಿ ಬಂದು ||
ಜಂಜಡದ ಯಾಗಶಾಲೆಯೊಳಾಗ ಸತ್ತವರ |
ವ್ಯಂಜಿತದಿ ಬದುಕಿಸಲ್ಕೆಂದು || 222 ||
ಜಾತವೇದನಿಗರ್ಪಿಸಿದ ದಕ್ಷ ಶಿರವದಕೆ |
ಆತನನು ಬದುಕಿಸಲು ಅಜದ ||
ಆ ತಲೆಯ ಕತ್ತರಿಸಿ ಸೇರಿಸಲು ಸುರಪ ಖ |
ದ್ಯೋತಸುತರನ್ನು ಕರೆದೆಂದ || 223 ||
ಸುಮ್ಮನಿಹಿರೇಕೆಂಬುದೆನಗರ್ಥವಾಯ್ತು ಮನ |
ದುಮ್ಮಳಿಕೆ ಬಿಡಿರಯ್ಯ ನೀವು ||
ಎಮ್ಮ ಸಮ ಹವಿಗಳನು ನಾನಿಮಗೆ ಕೊಡಿಸುವೆನು |
ನೆಮ್ಮಿಕೊಳ್ಳಿರಿ ದಿಟದ ನುಡಿಯ || 224 ||

**ಸುರುಟಿ - ಏಕ**
ನುಡಿ ಬದ್ಧತೆ ನಿನಗೆ | ವೃತ್ತಿಯ |
ಗಡಿ ಶುದ್ಧತೆ ಯೆಮಗೆ ||
ಬಿಡು ನೀ ಚಿಂತೆಯ | ತೊಡಕನು ತೊಲಗಿಸಿ ||
ಕಡಿದೀ ಕಂಠವ | ದೃಢದಲಿ ಬೆಸೆವೆವು || 225 ||

**ಕೇದಾರಗೌಳ - ಅಷ್ಟ**
ಆಡಿನ ರುಂಡವ ದಕ್ಷನ ಮುಂಡಕ್ಕೆ |
ಜೋಡಿಸಿ ಭೃಗು ಮುನಿಯ ||
ಕಾಡಿಪ ಕಂಗಳ ನೋವ ನಿವಾರಿಪ |
ಗಾಢ ಚಿಕಿತ್ಸೆಯನು || 226 ||

**ಶಂಕರಾಭರಣ - ಏಕ**
ಚೆಲ್ವ ಭಗನ ಭಗ್ನಗೊಂಡ |
ಹಲ್ಲುಗಳಿಗೆ ವಿಶ್ವಕೆಲ್ಲ |
ದುರ್ಲಭದ ಚಿಕಿತ್ಸೆ ಗೈದ | ರಲ್ಲಿ ತೋಷದಿ || 227 ||
(ಜಗಕೆ ನವ್ಯವಹ ಚಿಕಿತ್ಸೆ |
ನಗುತ ಗೈದರಾಗ ಮೌನಿ |
ಭಗನ ಮುರಿದ ಹಲ್ಲುಗಳ್ಗೆ | ಸೊಗಸಿನಿಂದಲಿ || 228 ಬ || )

ಕ್ಲೇಶಗೊಂಡರಿಂಗೆ ತಕ್ಕ |
ಔಷಧೋಪಚಾರಗಳನು |
ತೋಷದಿಂದಲೆಸಗುತಿಹರು | ಏಸು ಪ್ರೇಮವೊ || 229 ||
ಅನಿತರೊಳಗೆ ನಾರಾಯಣನು |
ವಿನತೆಸುತನ ಹೆಗಲನೇರಿ |
ಘನ ಶುಭಾಂತ ಬಯಸಿ ಬಂದ | ಚಿನುಮಯಾತ್ಮಕ || 230 ||
ಶರಣೆನುತ್ತ ಕೈಯ ಮುಗಿದು |
ಎರಗಿ ನಿಂದ ಸರ್ವರನ್ನು |
ಕರುಣನಿಧಿಯು ಮನ್ನಿಸಿದನು | ಹರುಷದಿಂದಲಿ || 231 ||

**ಭೋಗ ಷಟ್ಪದಿ**
ಸುಮತಿಯಾಗಿ ದಕ್ಷನೆದ್ದು |
ವಿಮಲ ಹೃದಯ ಭಾವದಿಂದ |
ಪ್ರಮಥಪತಿಯ ಸ್ತವನ ಗೈದ | ಚಮೆಯ ನಾಮದಿ ||
ದ್ಯುಮಣಿಸುತರ ವೈದ್ಯ ಕ್ರಮಕೆ |
ಕಮಲಜಾತ ಕಮಲನೇತ್ರ |
ಡಮರುಧರರು ಪೊಗಳುತೈದರಮಿತ ಹರ್ಷದಿ || 232 ||

**ಮಧುಮಾಧವಿ - ತ್ರಿವುಡೆ**
ಪೊಗಳುತೈದಿದ ದೇವತೆಯರನು |
ನಗುತ ಬೀಳ್ಕೊಂಡಾ ತರಣಿಜರು |
ಗಗನ ಮಾರ್ಗವ ಪಿಡಿದು ಪೊರಟರು | ಜಗವನೀಕ್ಷಿಪ ಧ್ಯೇಯದಿ || 233 ||

**ಸಂಧಿ ೩: ಹವಿರ್ಮಾನ್ಯತೆ (ಸತಿ ಸುಕನ್ಯಾ)**

**ಆರ್ಯಸವಾಯಿ - ಏಕ**
ದೊರೆ ಶರ್ಯಾತಿಯ ತರಳೆ ಸುಕನ್ಯೆಯು |
ಎರಗುತ ತನ್ನಿನಿಯನ ಪದಕೆ ||
ಸರಸಿಯೊಳಿಳಿಸುತ ವಿರಚಿಸಿ ಸ್ನಾನವ |
ಕರೆ ತಂದಿಹೆ ನಿಮ್ಮನು ಗೃಹಕೆ || 234 ||
ಸ್ವಚ್ಛಾಂಗಿಯೆ ನಿನ್ನಿಚ್ಛಾಶಕ್ತಿಯ |
ಮೆಚ್ಚದ ಮನವೆಂದಿಗು ಬರದು ||
ನೆಚ್ಚಿದರನು ತೊರೆದಚ್ಚರಿದೋರಿದ |
ನಿಚ್ಚಟ ತ್ಯಾಗಿಯು ನೀನಹುದು || 235 ||

**ಬೇಗಡೆ - ಏಕ**
ಸತಿಯರೊಳು ನಿನ್ನ ಸರಿ ಯಾರಿಹರೆ | ನಿರ್ವ್ಯಾಜ ತ್ಯಾಗಕೆ |
ಪ್ರತಿಮೆಯಹುದೆಲೆ ಜಾಣೆ ಗಂಭೀರೆ ||
ಕ್ಷಿತಿಪತಿಯ ಸುತೆಯಾಗಿ ನಿನ್ನಯ |
ಹಿತವಲಕ್ಷಿಸಿ ಹೆರವರೊಳಿತಿಗೆ |
ಸತತ ನಿರ್ಮಲ ಹೃದಯ ಭಾವದಿ |
ಪತಿಯ ಸೇವೆಯ ಮಾಳ್ಪ ನಿಶ್ಚಯ || 236 ||

**ಕಾಂಬೋಧಿ - ಏಕ**
ವಲ್ಲಭ ಕೇಳಿಷ್ಟು ಕಾರ್ಯಕೆನ್ನ ಪೊಗಳ್ವುದೇಕೆ |
ಎಲ್ಲ ನಿಮ್ಮಾಶಿರ್ವಾದ ಕಲ್ಯಾಣಾಂಗ ನಿಜಕೆ || 237 ||
ನದಿಗೆ ಪೋಗಿ ನಿತ್ಯಾನುಷ್ಠಾನಂಗಳಿಗೆ ಬೇಗ |
ವದಗಿ ಶುದ್ಧೋದಕವ ತಹೆನೆಂದು ಸತಿಯಾಗ || 238 ||

**ಶ್ರೀ - ಏಕ**
ಚೆಂದದೊಳನುಮತಿ ಪಡೆದು ಸುಕನ್ಯೆಯು |
ಬಂದಳು ಜಲದೆಡೆಗೆ ||
ಮಿಂದು ಸಲಿಲ ಸಹಿತಲೆ ಮುನ್ನಡೆದಳು |
ಮಂದಿರಕೆನುತಾಗ || 239 ||
ಸ್ವೇಚ್ಛಾಚಾರದೊಳಶ್ವಿನಿ ಕುವರರು |
ಉಚ್ಚವಿಹಾರದಲಿ ||
ಚಚ್ಚರಿಸುತ ನಡೆತರಲಾಕೆಯ ಕಂ |
ಡಚ್ಚರಿ ಗೊಳುತಾಗ || 240 ||

**ಯಮನ್ ಕಲ್ಯಾಣಿ - ಅಷ್ಟ**

ಅಮಮ ಯಾರಿವಳು ಮೋಹಿನಿ ಚೆಲುವೆ | ಎಮ್ಮ |
ಸುಮನ ಸೂರೆಯ ಪೇಳಲೇನಳವೆ || ಪ ||
ರತಿಯ ಮೀರಿದ ಸೌಂದರ್ಯದ ಪ್ರತಿಮೆ | ಸರ್ವ |
ಸತಿಯರೊಳ್ ವರಶಿಖಾಮಣಿಯುಪಮೆ ||
ಲತೆಯು ನಾಚುವಹ ಥಳಕು ಬಳಕು | ಹಂಸ |
ಗತಿಯ ವರ್ಣಿಪುದೇನು ಮನಸೆಳಕು || 241 ||
ಶೋಭೆಯೋಳ್ ಪ್ರತ್ಯಕ್ಷ ವೀಣಾಪಾಣಿ | ಇನ್ನು |
ಸೌಭಾಗ್ಯದೊಳು ನಾರಾಯಣನ ರಾಣಿ ||
ಶೋಭನೆ ಗಿರಿಜಾತೆಯಂತಿಹಳು | ನಿಜ ನಿ |
ರಾಭರಣದಲಿ ಕಂಗೊಳಿಸುವಳು || 242 ||

**ಕಂದ**

ಆಹಾ ಚಿತ್ತಾಕರ್ಷಕ |
ಮೋಹನೆಯಿವಳಂಗ ಸೌಷ್ಠವವಿದನ್ಯತ್ರಂ ||
ಊಹಿಸಲಸಾಧ್ಯ ಮನದ ಕು |
ತೂಹಲ ತಣಿಸಲ್ಕೆ ಹಿತದಿ ನುಡಿಸುವೆವೆನುತಂ || 243 ||

**ಮೋಹನ - ಏಕ**

ತರುಣಿ | ಹೃನ್ಮನ ಮೋಹಿನಿ ಶುಭ ರಮಣಿ ||
ಸರಸಿಜಮುಖಿ ನೀ | ವರಿಸೆಮ್ಮನು ಪರಿ |
ಪರಿ ಭಾಗ್ಯವ ನಾವ್ | ಕರುಣಿಪೆವೀಗಲೆ || 244 ||
ಚದುರೆ | ಮದಗಜಗಾಮಿನಿ ನವ ಮಧುರೆ ||
ಮುದದಿಂದೀ ಮನ | ಕೊದಗುತ ಬೇಗನೆ ||
ಸದಭಿಪ್ರಾಯದಿ | ಮದುವೆಯ ಮಾಡಿಕೊ || 245 ||

**ಶಂಕರಾಭರಣ - ಏಕ**

ಏತಕಿಂತು ಪಾತಕದಲಿ |
ಮಾತ ಪೇಳ್ವಿರಣ್ಣಗಳಿರ ||
ಪ್ರೀತಿಯಿಂದೋರ್ವೋರ್ವಳಿಂಗೆ | ನಾಥರಾಗಿರಿ || 246 ||

**ಗೌಳ - ಆದಿ**

ಕೀರವಾಣಿಯೆ ಬಾರೆ ಸುಭಗೆ ಶೃಂಗಾರೆ |
ತೋರದೆ ಕೋಪವ ಮನ್ನಿಸುತ್ತಾಹವ || ಪ ||
ತಪನಬಾಲರು ನಾವು ನೀ ಪದುಮದ ಹೂವು |
ವಿಪುಲ ಮಾತುಗಳೇಕೆ ಸಫಲಗೊಂಬುದಕೆ || 247 ||

**ಶಂಕರಾಭರಣ - ಏಕ**

ಸಭ್ಯತೆಯನು ಮೀರುತೀಗ |
ಇಬ್ಬರೊಬ್ಬಳನ್ನು ಬಯಸಿ |
ಕುಬ್ಜರಾಹಿರಯ್ಯ ನೀವು | ಕೊಬ್ಬಿನಿಂದಲಿ || 248 ||

**ಗೌಳ - ಆದಿ**

ಅವಳಿಗಳೆಮ್ಮೊಳು ಕವಲೆಣಿಸದೆ ತಾಳು |
ಅವಿರತ ಸುವಿಲಾಸ ದಿವಿಯೊಳು ವಾಸ || 249 ||
ಬದಲು ಯೋಚನೆ ಬೇಡ ಮದುವೆಯಾಗೌ ಗಾಢ |
ಕದಲದ ಸಂಪದ ವದಗಿತ್ತಪೆವದ || 250 ||

**ನಾಟಿ - ತ್ರಿವುಡೆ**

ಹೇಸದಂದದಿ ಪರ ವನಿತೆಯನು |
ಆಸೆ ಪಡುವುದು ನೀತಿಯೆ ||
ಆ ಸನಾತನ ಧರ್ಮ ಕ್ರಮಗಳಿ |
ಗೇಸು ಹಾನಿಯು ತಿಳಿಯಿರಿ || ನೀವ್ ತೆರಳಿರಿ || 251 ||

**ಮಾರವಿ - ಏಕ**
ಸೋತಿಹೆವೆಂದರೆ ನೀತಿಯ ಪೇಳ್ವೆಯ |
ಓ ತರುಣಿಯೆ ನಿನ್ನ ||
ಖ್ಯಾತಿಯೊಳೆಮ್ಮಯ ಪುರಿಗೆಳೆದೊಯ್ವರೆ |
ಕೌತುಕವೇನಿಲ್ಲ || 252 ||
ವಶವಾಗದಳನು ಪಿಡಿದೆಳೆದೊಯ್ವರೆ |
ಪಶುವೆಂದರಿತಿಹಿರೆ ||
ಕೃಶಳೇಂ ಸಾಧ್ವಿಯು ತೋರುವೆ ಶಾಪದಿ |
ವಿಷಮಿತ ಮಾನಸರೆ || 253 ||

**ಭಾಮಿನಿ**
ಕರದಿ ಜಲವಂ ಪಿಡಿದು ನಿಂತಾ |
ತರುಣಿಯನು ಕಂಡಾಶ್ವಿನೇಯರು |
ಭರಿತ ಭಯದಿಂ ನಡನಡುಗಿ ಕೈಮುಗಿದು ಬೇಡಿದರು ||
ಕರುಣೆ ತೋರೌ ತಾಯೆ ಕೆಟ್ಟೆವು |
ಸರುವ ತಪ್ಪನು ಒಪ್ಪಿಕೊಂಬೆವು |
ವರವ ಬೇಡಿಕೊ ಖಂಡಪರಶುವಿನಾಣೆ ನೀಡುವೆವು || 254 ||

**ಕಂದ**
ಸೌರಿಗಳೆಂದುದ ಕೇಳುತ |
ಮೇರು ಮುನಿಪನ ಸತಿ ಸ್ವೈರಣೆಯ ತಾಳುತಲೀ ||
ಗೌರವವಾಂತಾ ಸುರರಿಂ |
ಕೋರಿಕೆಯಂ ಮಂಡಿಸಿದಳು ತಾಂ ಮುದವೆತ್ತುಂ || 255 ||

**ಸಾಂಗತ್ಯ - ರೂಪಕ**
ಅವನೀಶ ಶರ್ಯಾತಿ ತರಳೆ ಸುಕನ್ಯೆ ನಾ |
ಚ್ಯವನ ಮಹರ್ಷಿಯ ಸತಿಯು ||
ಸವನಿತ ವೃದ್ಧಾಪ್ಯ ಮೇಣಂಧ ಪತಿಸೇವೆ |
ಬವಣೆಯೆಂದೆಣಿಸದೆ ಮಾಳ್ಪೆ || 256 ||
ಮಹದನುಗ್ರಹ ಬೀರ್ವುದು ನಿಜವಾದರೆ |
ಕಹಿಯನುಭವಿಸುವ ಪತಿಗೆ ||
ಬಹು ರೂಪ ಯೌವನ ಕಂಗಳನಿತ್ತತಿ |
ಸುಹಿತಗೋಳಿಸಿರೆನ್ನ ಬದುಕ || 257 ||
ಪತಿವ್ರತೆಯಹುದಮ್ಮ ಮನಕೆ ಮೆಚ್ಚುಗೆಯಾಯ್ತು |
ಸತಿಧರ್ಮದಂತೆ ನೀ ನಡೆದೆ ||
ಪತಿಯ ತೋರಿಸು ನಡೆಯೆಂದು ಬಂದರು ಭೃಗು |
ಸುತನಾದ ಚ್ಯವನನಿದ್ದೆಡೆಗೆ || 258 ||
ಮುನಿರಾಯ ಕೇಳ್ನಿನ್ನ ಸತಿ ಸುಕನ್ಯೆಯ ಧರ್ಮ |
ಕನುವಾದ ನಡತೆಗೆ ಮೆಚ್ಚಿ ||
ತನುವಿಂಗೆ ಕಲ್ಪವನೆಸಗೆ ಬಂದಿಹೆವೆನೆ |
ಅನುಮತಿಯಿತ್ತನಾ ಮುನಿಯು || 259 ||

**ಕಾಂಬೋಧಿ - ಝಂಪೆ**
ನೋಡುತಲಿ ಸುರವೈದ್ಯರಾ ವೃದ್ಧ ಚ್ಯವನನನು |
ಕೂಡಿ ಸರಸಿಯೊಳಿಳಿದು ಬೇಗ ||
ರೂಢಿಗತಿ ನೂತನದ ಕಾಯಕಲ್ಪವನೆಸಗೆ |
ಪ್ರೌಢ ರೂಪಾತಿಶಯವೊದಗೆ || 260 ||
ಕಂಗೊಳಿಸಿ ಮೆರೆಯುತಿರೆ ಸತಿಸುಕನ್ಯೆಯ ಮನಕೆ |
ಕಂಗೆಟ್ಟು ಬಲು ಚಿಂತೆಯಾಯ್ತು ||
ವಿಂಗಡಿಸಲಸದಳದ ರೂಪ ಮೂರನು ನೋಡಿ |
ಮಂಗಳೆಯು ದಿಕ್ಕೆಟ್ಟಳಾಗ || 261 ||
ಸುಮ್ಮನೇತಕೆ ನಿಂತೆ ನಿನ್ನ ಪತಿಯಾರೆಂದು |
ಎಮ್ಮೊಳಗೆ ಪರಿಶೀಲಿಸೆನಲು ||
ಸಮ್ಮತಿಸಿ ಮುಂಬರಿದು ಪತಿಕರವ ಪಿಡಿಯೆ ತಾ |
ನೆಮ್ಮಿರುವ ಸದ್ಧರ್ಮದಿಂದ || 262 ||

**ಕಂದ**
ಎರಗಿದ ಸತಿಯಂ ತಳ್ಕಿಸಿ |
ಸುರಭೇಷಜರೊಡನುಸುರ್ದನಾ ಮುನಿ ಚ್ಯವನಂ ||
ಬರಡು ಹಯನಾಯ್ತು ಕೊರಡು ಕೊ |
ನರಿಹುದು ಪ್ರತಿಯಾಗಿ ಗೈಯಲೇಂ ಪೇಳುವುದೂ || 263 ||

**ಭೂಪಾಳಿ - ಏಕ**
ಯತಿಯೆ ಕೇಳು ವೈದ್ಯಕೆಂದು |
ಪ್ರತಿಯ ಪಡೆವುದುಚಿತವಲ್ಲ |
ಪೃಥುವಿಯಮರ ನಿನ್ನ ನುಡಿಯು |
ಪಥದಿ ಪತನವಾಗೆ ಸಲ್ಲ || 264 ||
ಅದಕೆ ಕಾರ್ಯ ಪೇಳ್ವೆವೊಂದು |
ತ್ರಿದಶಪತಿಯು ಎಮ್ಮನಿಂದು ||
ಅದಿತಿಸುತರೋಳ್ ಶೂದ್ರರೆಂದು |
ಪದ ಸಮಾನ ಹವಿಯ ತಡೆವ || 265 ||
ಯತಿ ಸಂಕಲ್ಪ ಶಕ್ತಿಯೆದುರು |
ಪೃಥುಲ ಶಕ್ತಿಯನ್ಯವಿಲ್ಲ |
ಕ್ರತುಗಳಲ್ಲಿ ಹವಿಗಳನ್ನು |
ಸತತ ಕೊಡುವ ಕ್ರಮವ ವಿಧಿಸು || 266 ||

**ನಾದನಾಮಕ್ರಿಯೆ - ಅಷ್ಟ**
ಇಷ್ಟಕ್ಕೆ ಯೋಚಿಪುದೇತಕೆ | ನಡೆ |
ವಿಷ್ಟಿಯೋಳ್ ಹವಿಯ ನೀಡುವುದಕೆ ||
ದಿಟ್ಟ ಪ್ರತಿಜ್ಞೆಯ ಕೇಳಿರಿ | ಸಂ |
ತುಷ್ಟಿಯ ಸರ್ವದಾ ತಾಳಿರಿ || 267 ||
ತಡೆದರೆ ಪಾಕಶಾಸನನೇನು | ಬಿಡಿ |
ಜಡಜಸಂಭವ ಹರಿ ಮೃಡರನು ||
ಕಡೆಗಣಿಸುವೆ ಬಾಹ್ಯ ಶಕ್ತಿಯ | ಮೇಣ್ |
ಮುಡುಪಾಗಿಡುವೆನೆನ್ನ ಸಿದ್ಧಿಯ || 268 ||
ಎನೆ ಕೇಳಿ ಸಂತಸ ಹೊಂದುತ | ಸೂರ್ಯ |
ತನಯರು ಶುಭವ ಹಾರೈಸುತ ||
ಕನಕದ ರಥವೇರ್ದು ಬಾನಿನ | ಪಥ |
ವನುಸರಿಸಿದರು ಆದಿನ || 269 ||

**ಮಧ್ಯಮಾವತಿ - ಅಷ್ಟ**
ಓ ಮನಸ್ವಿನಿ ಕೋಮಲೆ | ಸನಿಸನಿಹ ಬಾ |
ಪ್ರೇಮಪುತ್ಥಳಿ ಸುಶೀಲೆ || ವಿಕಸಿತ ಪೂಮಾಲೆ ||
ಕಾರ್ಯ ಕರಣದಿ ರೂಪ ಶಯನಾ |
ಹಾರ್ಯ ಕ್ಷಮೆಯಲಿ ನ್ಯೂನವಿಲ್ಲದ |
ಚರ್ಯೆಗಳು ಶಾಸ್ತ್ರೋಕ್ತ ಷಡ್ಗುಣ |
ಆರ್ಯ ಸತಿಯರಿಗೊಪ್ಪುವಂತಿದೆ || 270 ||

**(ಕಾನಡಾ) ಆನಂದಭೈರವಿ - ಏಕ**
ನಿಮ್ಮ ಸೇವೆಗಿಂತಲನ್ಯ | ಸಮ್ಮತದ ಕಾರ್ಯವಿಲ್ಲ |
ಸುಮ್ಮನೇಕೆ ಪೊಗಳುತಿಹಿರಿ | ಎಂದಳು | ನಾಚಿ | ನಿಂದಳು || 271 ||

**ಯಮನ್‌ಕಲ್ಯಾಣಿ - ತ್ರಿವುಡೆ**
ಮಲ್ಲಿಕಾಸ್ಮಿತ ರುಚಿರೆ ಕೇಳೆಲೆ |
ಕಲ್ಲು ಹೃದಯದ ಶುಂಠನು ||
ಅಲ್ಲವೆಲೆ ನಾ ನಿನ್ನ ಬಯಕೆಯ |
ನೆಲ್ಲವನು ಸಲ್ಲಿಸುವೆನು || 272 ||
ಧೀರ್ಘ ತಪಸಿನೊಳರ್ಧ ಭಾಗದಿ |
ಸ್ವರ್ಗ ಭೋಗವ ಕಲ್ಪಿಸಿ ||
ವೆಗ್ಗಳದ ಸುಖ ಕೊಡುವೆನೆಂದನು |
ಭಾರ್ಗವಾಖ್ಯನು ಮೋದದಿ || 273 ||

**ಕುಸುಮ ಷಟ್ಪದಿ**
ತ್ರಿದಶಾಯಲವ ಮೀರಿ |
ಸದನವನು ನಿರ್ಮಿಸುತ |
ಮೊದಲ ಮಧುಚಂದ್ರದೋಲ್ ಸಂತೋಷದಿ ||
ವದಗಿನಿಂ ಪುಷ್ಪಕದಿ |
ವಿಧವಿಧದ ತಿರುಗಾಟ |
ಮೊದಲಾಗಿ ಸಕಲಸುಖ ಲೀನರಾಗಿ || 274 ||
ಆಕಾಶ ಸುತ್ತುತ್ತ |
ಆಕಾಡ ಸೊಗಸವಿದು |
ನೌಕೆಯೇರಿಳಿದು ಜಲಕ್ರೀಡೆಯಲಿ ||
ನೂಕಿದರು ಕೆಲವರ್ಷ |
ಲೋಕಲೋಕಂಗಳಲಿ |
ಲೌಕಿಕಾನಂದವನುಭವಿಸುತ್ತಲಿ || 275 ||

**ಕಾನಡ - ಝಂಪೆ (ಝಂಪೆ ಷಟ್ಪದಿ)**
ಉತ್ತಮದ ಸಾಕೇತ ಪತ್ತಣದೊಳೊಂದು ದಿನ |
ಮಿತ್ರಸುತ ವೈವಸ್ವತಾಖ್ಯಭವ ಶರ್ಯಾತಿ |
ಸಪ್ತಾಂಗಕೊಪ್ಪಿರುವ ಸಭೆಯೊಳಂ ಮಂಡಿಸುತಲಿ ||
ಆಸ್ಥಾನಿಕರನುಚಿತ ತರತರದಿ ಮನ್ನಿಸುತ |
ನಿತ್ಯದಲಿ ಹೃದಯವನು ಭೇದಿಸುತ್ತಿಹ ಮಹಾ |
ಚಿತ್ರದುಮ್ಮಳಿಕೆಗಳ ಮನಕರಗಿ ಬಿತ್ತರಿಸಿದ || 276 ||

**ಹಂಸಾನಂದಿ - ತ್ರಿವುಡೆ**
ಸತಿಸುಕನ್ಯೆಯು ವಿಧಿಯ ಭೀಕರ |
ಹತಿಯನುಣ್ಣುತ ತ್ಯಾಗ ಭಾವದಿ |
ಯತಿಯನುರೆ ವೈವಾಹವಾದಳು |
ಸುತರ ಪಡೆಯದ ಮುಂದೆನಗೆ ಸ |
ದ್ಗತಿಯು ಸಿಗದು | ದಿನದಿನ | ವ್ಯಥಿಪುದಾಯ್ತು || 277 ||

**ಪಂತುವರಾಳಿ - ಏಕ**
ಗುರು ವಶಿಷ್ಠರು ಆಶೀರ್ವದಿಸಿ | ಪೇಳಿದರಾಗ |
ಗುರುತರ ವ್ಯಥೆಯೇಕೆ ಸಹಸಿ ||
ಧರಣಿಪ ಕೇಳ್ ಸುತಕಾಮನೆಯನು ನೀ |
ತೊರೆವುತ ಸರ್ವಸಮರ್ಪಣ ಭಾವದಿ |
ವರಸುತಕಾಮೇಷ್ಟಿಯ ಕೈಗೊಳ್ಳಲು |
ಕರುಣದಿ ಪೊರೆವನು ಹರಿಸರ್ವೋತ್ತಮ || 278 ||
ನುಡಿ ಕೇಳಿ ಧಾರುಣಿಪಾಲ | ಪುರೋಹಿತ |
ರಡಿಗೆ ವಂದಿಸುತೆಂದ ಶೀಲ ||
ಒಡಲುರಿಯಾಳವನರಿತಿಹ ಮಹಿಮರೆ |
ದೃಢಸಂಕಲ್ಪವ ಗೈದಪೆನೀಗಲೆ |
ಅಡವಿಯೊಳಿಹ ಸುತೆ ಸಹ ಜಾಮಾತರ |
ಸಡಗರದಲಿ ಪಾಲ್ಗೊಳ್ಳಲು ಕರೆತಹೆ || 279 ||

**ಕಂದ**
ಸುತೆಯಂ ಕಾಂಬುತ್ಸಾಹದಿ |
ಪೃಥವಿಪ ಶರ್ಯಾತಿ ಬಲು ತರದ ಸಂತಸದಿಂ ||
ಮಿತ ಪರಿವಾರವ ವೆರಸುತ |
ಪಥವಿಡಿದು ಪೊರಟ ವನಾಂತರಕೆ ಸಂಭ್ರಮದಿಂ || 280 ||

**ಸೌರಾಷ್ಟ್ರ - ತ್ರಿವುಡೆ**
ವಿಪಿನ ಮಧ್ಯಕೆ ಭರದೊಳೈತರೆ |
ವಿಪುಲ ಸಂಭ್ರಮದಿಂದಲಿಹ ಯುವ |
ತಪಸಿಗಳ ಕಂಡಾಗ ಮನದಲಿ | ಕುಪಿತನಾದ || 281 ||
ಏನಿದಚ್ಚರಿ ಸುತೆ ಸುಕನ್ಯೆಯು |
ಹೀನ ಕಾರ್ಯಕೆ ಮನವಗೊಟ್ಟಳೆ |
ಹಾನಿಯಿದು ಸದ್ಧರ್ಮ ರೀತಿಗೆ | ಮಾಣಿಸುವೆನು || 282 ||

ತಂದೆಯನು ಕಂಡಾಗಲೋಡೊತ |
ಬಂದು ಸಾಧ್ವಿಯು ಪಾದ ಕಮಲಕೆ |
ವಂದಿಸಿರಲದ ನೋಡಿ ಕೋಪದೊ | ಳೆಂದ ಜನಪ || 283 ||
ಎಲೆಲೆ ಮೂರ್ಖಳೆ ಯೌವನದ ಮದ |
ತಳುವದುಕ್ಕಿತೆ ಹದಿಬದೆಯ ಸಂ |
ಕಲಿತ ಧರ್ಮವ ತೊರೆದೆ ನಿಜಕುಲ | ಮಲಿನವಾಯ್ತು || 284 ||
ಕಂಗಳಿಲ್ಲದ ವೃದ್ಧ ಪತಿಯು |
ಲ್ಲಂಘಿಸುತ್ತಲಿ ಯೌವನದ ಯತಿ |
ಸಂಘ ಸೊಗಸಿತೆ ದುರ್ನಡತೆಯನು | ಭಂಗಿಸುವೆನು || 285 ||

**ತುಜಾವಂತು - ಝಂಪೆ**

ಎಂದ ನುಡಿ ಕೇಳುತಲಸಮ ಮುಗಳ್ನಗೆಯಿಂದ |
ಲೆಂದಳಾ ವೃತ್ತಾಂತ ವಿವರವೆಲ್ಲವ ||
ತಂದೆ ಕೇಳ್ ನಡತೆಗೆಟ್ಟವಳಲ್ಲ ನಿಮ್ಮ ಸುತೆ |
ಅಂದಶ್ವಿನೀಸುತರ ಕರುಣ ಕಾರಣದಿ || 286 ||
ಮಾವ ಕೇಳಿಂದೆನಗೆ ದೊರಕಿರುವ ದೃಷ್ಟಿ ಮೇಣ್ |
ಯೌವನಕೆ ತರಣಿಜರನುಗ್ರಹಂಗಳಿಗೆ ||
ಈ ವನಿತೆ ಭಾವ ಶುದ್ಧಿಯೊಳು ಗೈದಿರುವ ಪತಿ |
ಸೇವೆ ನಿಚ್ಚಟದ ಕಾರಣಗಳಾಗಿಹುದು || 287 ||
ನುಡಿಯ ಕೇಳುತಲಾಗ ಪೊಡವಿಪಾಲನು ಪೇಳ್ದ |
ದುಡುಕಿನಿಂ ಕೆಡುಕೆಂಬ ಮಾತು ನಿಜವಾಯ್ತು ||
ಒಡವರಿಕೆ ಹಸನಾಯ್ತು ಪುತ್ರಕಾಮೇಷ್ಟಿಯನು |
ತೊಡಗಲಿಹೆ ಪೋಪುದೇಳಿರಿ ನಗರಕೆಲ್ಲ || 288 ||
ಧರಣಿಪಾಲನೆ ಕೇಳು ಸಂತಾನಪ್ರದವಾದ |
ವರ ಪುತ್ರಕಾಮೇಷ್ಟಿಯನು ಗೈವುದುಚಿತ ||
ಗುರು ವಶಿಷ್ಠರನುಜ್ಞೆಯಿಂ ಪಡೆದು ಯಾಗದಲಿ |
ಪಿರಿತನವ ವಹಿಸಿಕೊಂಬೆನು ಸಂತಸದಲಿ || 289 ||

**ದ್ವಿಪದಿ**

ಚ್ಯವನ ಮುಖ್ಯರು ಪೊರಟು ಪುರವ ಸೇರಿದರು |
ಅವರವರ ಕಾರ್ಯದಲಿ ಸತತ ತೊಡಗಿದರು || 290 ||
ಸಕಲ ಸಾಂಭಾರವನು ಸೇರಿಸಿದ ಜನಪ |
ಅಖಿಲ ಮುನಿನಿಕರದಿಂ ಶೋಭಿಪ ಕಲಾಪ || 291 ||
ಜಡಜಾಪ್ತ ವಂಶ ಲಲಾಮ ಶರ್ಯಾತಿ |
ಮಡದಿಸಹ ದೀಕ್ಷೆ ಹೊಂದಿದ ಭಕ್ತಿ ಪೂರ್ತಿ || 292 ||
ಮಂತ್ರಘೋಷವದು ಗಗನಾಂತರಕೆ ಮೊಳಗೆ |
ತಂತ್ರಾಗಮಾದ್ಭುತದ ಕರ್ಮ ಜಗದೊಳಗೆ || 293 ||
ಇಂದ್ರಾದಿಗಳ್ಗೆ ಕ್ರಮದಂತೆ ಹವಿಗಳನು |
ಗಂಧವಹ ಸಖಿನಮುಖದಿಂದರ್ಪಿಸಿದನು || 294 ||
ವಚನವಿತ್ತಂತಶ್ವಿನೀ ಸುತರ ಕರೆಯೆ |
ಶಚಿಪತಿಯು ಕೇಳಿ ಕೆರಳುತ್ತೆಂದ ಮುನಿಯೆ || 295 ||

**ಸೌರಾಷ್ಟ್ರ - ತ್ರಿವುಡೆ**

ನೋಡಿದಿರೆ ಸುಮನಸರು ಭುವಿಯಾ |
ಕಾಡು ಮುನಿಪತಿ ಚ್ಯವನನೆಸಗಿದ |
ಮೂಢ ಕರ್ಮಗಳಿಗೆ ವಿರೋಧವ | ಮಾಡಬೇಕು || 296 ||
ಸುರರೊಳಂತ್ಯಜರಾಶ್ವಿನೇಯರು |
ನೆರೆ ಬಹಿಷ್ಕೃತರಿಂಗೆ ಹವಿಗಳ |
ಕರೆದು ಕೊಡುಲಿಹನುದ್ಧಟನ ಧಿ | ಕ್ಕರಿಸಬೇಕು || 297 ||
ಕೊಂದು ಕಳೆವೆನು ನೀತಿ ರಹಿತನ |
ಮಂದಮತಿಗಿದು ತಕ್ಕ ಶಿಕ್ಷೆಯು |
ಎಂದು ಕರದೊಳು ವಜ್ರವೆತ್ತಿದ | ಇಂದ್ರ ತಾನು || 298 ||
ಕಂಡು ಭಾರ್ಗವನಮಿತ ಕ್ರೋಧದಿ |
ದಂಡಿಪನ ದಂಡಿಸುವೆನೆಂದಾ |
ಖಂಡಲನ ಕರ ಸ್ತಬ್ಧಗೊಳಿಸಿದ | ಚಂಡ ಛಲದಿ || 299 ||
ತಿಣುಕಿದನು ಸುರರಾಯ ಕದಲದೆ |
ಕುನಿತ ದೇಹದೊಳವನು ವ್ಯಥಿಸಿ ವ |
ದನವದೋರಲರಿಯದೆ ಲಜ್ಜಾ | ಮನದಿ ನಿಂತ || 300 ||

**ನಾದನಾಮಕ್ರಿಯೆ - ರೂಪಕ**
ನೀತಿ ತಪ್ಪಿದವರದಾರಯ್ಯ | ಮೂಲೋಕದಧಿ |
ನಾಥ ತಿಳಿಯೊ ನಿನ್ನ ನಡತೆಯ || ಪ ||
ಧಾತಜಾತ ದಕ್ಷನಿಂಗೆ | ನೂತನಶಿರ ವೈದ್ಯಗೈವ |
ಸಾತಿಶಯದ ಕಾಲದಲ್ಲಿ | ಮಾತ ಕೊಟ್ಟು ಮರೆತೆಯೇನು ||
ಭೂತ ವೈರವೆಮ್ಮೊಳಿಲ್ಲವು | ಅರವಿಂದಮಿತ್ರ |
ಜಾತರಿಂಗೆ ಸರಿಸಮಾನವು || ಹವಿರ್ಭಾಗ ಸಿಗಲು |
ಪ್ರೀತಿಯಿಂದ ಕಾರ್ಯ ಸುಗಮವು || 301 ||

**(ನಾದನಾಮಕ್ರಿಯೆ ಅಷ್ಟ**
ನೀತಿ ತಪ್ಪಿದನಾರು ಪೇಳಯ್ಯ | ಮಖದಿ |
ಮಾತನಿತ್ತುದನೆಲ್ಲ ಮರೆತೆಯ ||
ಈ ತೆರ ಭಿನ್ನತೆಯೇಕಯ್ಯ | ಪುರು |
ಹೂತ ನಿನ್ನಾನನವೆತ್ತಯ್ಯ || 302 ಬ || )

**ಮಧ್ಯಮಾವತಿ - ಏಕ**
ಆ ಸಮಯದೆ ಬೃಹಸ್ಪತಿಯೆಂದ ಭೃಗುಜನೆ |
ಘೋಷಣಾ ವಾಕ್ಯವನೊಪ್ಪಿದೆನಯ್ಯ ||
ಪೂಷಜರಿಂಗೆ ಹವಿರ್ಭಾವ ದೊರಕಲಿ |
ವಾಸವ ಮುಖ್ಯರ ಸಮನಾಗಿ ನಿರುತ || 303 ||
ಸಾಂಬನಾಣೆಯು ಕೇಳು ಮಾನ್ಯತೆ ಕುರಿತಾಗಿ |
ನಂಬುಗೆಯನ್ನೀವೆ ನುಡಿಗೆಡರಿಲ್ಲ ||
ತುಂಬಿದಜ್ಞಾನದೆ ಸ್ತಂಭದಂತಾಗಿಹ |
ಜಂಭವೈರಿಯನು ನಿವೃತ್ತಿಯಗೊಳಿಸು || 304 ||

**ಕೇದಾರಗೌಳ - ಅಷ್ಟ**
ಗುರುವೆ ನಿಮ್ಮುಕ್ತಿಯನತಿಕ್ರಮಿಸಲರಿಯೆ |
ಸುರಪನ ಸ್ತಂಭನವ ||
ತರಿದಿಹೆ ನೋಡಿರಿ ಯಾಗಸಮಾಪ್ತಿಗೆ |
ತೆರವುಗೊಳಿಸಿ ತೋಷದಿ || 305 ||
ಭಾರ್ಗವ ನಮಿಪೆ ವಿರೋಧಿಸಿ ತಪ್ಪಿದೆ |
ಸ್ವರ್ಗದಿ ಯಮಳರಿಂಗೆ ||
ಯೋಗ್ಯಸ್ಥಾನವಿಹುದು ಸರಿಸಮ ಹವಿಯುಂಬ |
ಧೀರ್ಘ ಪ್ರಮಾಣವಿದು || 306 ||
ಜಗವು ದೈವಾಧೀನವಾಗಿರೆ ಆ ದೈವ |
ನಿಗಮ ಮಂತ್ರಾಧೀನವು ||
ಮಿಗಿಲಾದ ಮಂತ್ರವು ಬ್ರಾಹ್ಮಣಾಧೀನವು |
ಸೊಗದಿ ವಿಪ್ರರು ಪೂಜ್ಯರು || 307 ||
ಹವಿಗಳನರ್ಪಿಸಿ ಯಜ್ಞ ಪೂರ್ಣಾಹುತಿ |
ಚ್ಯವನ ಪೂರಯಿಸುತ್ತಿರೆ ||
ಸವನ ಪುರುಷ ಮೈದೋರುತಲಾಗ ಪಾಯಸ |
ಭುವನಪಾಲಕಗಿತ್ತನು || 308 ||
ಸಂತಸ ತಾಳುತ ತೆರಳಿದರೆಲ್ಲರು |
ಪಂಥ ಪೌರುಷ ಪೊಗಳಿ ||
ಮುಂತೆ ಪೇಳುವೆ ರವಿಜಾತರು ದೀನರ |
ಸಂತಯಿಸಿದ ಕಥೆಯ || 309 ||

**ಸಂಧಿ ೪: ಅಶ್ವಿನ್ಯನುಗ್ರಹ (ವೀರ ವನಿತೆ ವಿಶ್ಪಲೆ)**

**ವಚನ:** ಖೇಲ ನಾಮಕ ರಾಜ್ಯದಲಿ ಐಳ ಚಕ್ರವರ್ತಿಯೋಡ್ಡೋಲಗದಿ ಮೆರೆವ ಪರಿಯೆಂತೆನೆ -

**ಸೌರಾಷ್ಟ್ರ - ತ್ರಿವುಡೆ**
ಧರೆಯೊಳೆಸೆಯುವ ಖೇಲ ನಾಮಕ |
ಪುರವನಾಳುವ ಐಳಭೂಪನು |
ಪರಮ ಧಾರ್ಮಿಕ ಸತ್ಯಸಂಧನು | ಮೆರೆಯುತಿರ್ದ || 310 ||

ಮುನಿಯಗಸ್ತ್ಯರುಯೆಮಗೆ ಗುರುಗಳು |
ವನಿತೆ ವಿಶ್ವಲೆ ದಂಡನಾಯಕಿ |
ಗುಣ ಸುಸಂಸ್ಕೃತ ಸಭ್ಯ ಪ್ರಜೆಗಳು | ಮನಕೆತೋಷ || 311 ||
ತೋಳ ಸತ್ವವ ಪ್ರಕಟಿಸಿತ್ತಲಿ |
ಕಾಳಗದಿ ಗೆದ್ದಿಹೆನು ದೊರೆಗಳ |
ಕಾಲಕಾಲಕು ಕಪ್ಪ ಕೊಡುವರು | ಮೇಲುವರಿದು || 312 ||
ಮಕ್ಕಳಿಲ್ಲವು ವೃದ್ಧನಾದೆನು |
ದಿಕ್ಕುಗಾಣದ ಕೊರಗ ನೀಗಿಸಿ |
ಕಕ್ಕುಲತೆಯಿಂ ಕಾವುದೆಮ್ಮನು | ರಕ್ಕಸಾರಿ || 313 ||

**ವಚನ**
ಈ ಪರಿಯಿಂ ಜನಪಾಲ ತಾನಿರಲಾಗಿ, ಇತ್ತ ಪಾತಾಳದಲಿ ರಾಕ್ಷಸರಾಜ ಫಣಿದನುಜನು ತನ್ನಯ ಮಂತ್ರಿ ಶಠಾಸುರ ಮೇಣ್ ಸೇನಾನಿ ಮಠಾಸುರರಂ ಕೂಡುತ್ತ ಓಲಗಕೆ ಬರುವ ಪರಿಯೆಂತೆನೆ -

**ಭೈರವಿ - ಝಂಪೆ**
ಇತ್ತ ಫಣಿಯೆಂಬಸುರ | ಕೃತ್ತಿವಾಸನ ನೆನೆದು |
ಇತ್ತನೋಲಗ ದನುಜ | ಮೊತ್ತವನು ಸೇರಿ || 314 ||
ರಚಿಸಿದೀ ಸಭೆಯೊಳಗೆ | ಸಚಿವನಿಹ ಶಠದನುಜ ||
ಸುಚರಿತ ಮಠನು ಸೇನೆ | ನಿಚಯಕಧಿಪಾಲ || 315 ||

**ಸೌರಾಷ್ಟ್ರ – ತ್ರಿವುಡೆ**
ಬಾಹು ಬಲವೇ ಸರ್ವ ವಿಜಯಕೆ |
ಗೇಹವೆಂಬುದ ಸಾಧಿಸುತ ನಾ |
ಕಾಹುರದಿ ಮುರಿದಿಹೆನು ಶತ್ರು ಸ | ಮೂಹವನ್ನು || 316 ||

**ಕೇದಾರಗೌಳ - ಝಂಪೆ**
ಆದರೊಂದನು ತಿಳಿದಿರೆ | ವಂಶಜರ |
ತ್ರೈದಶರು ತಾವ್ ತರಿದರೆ ||
ಹೋದ ಕದನಕೆ ವೃತ್ರನು | ವಂಚಿಸುತ |
ಹ್ರಾದಿನೀಧರ ಕೊಂದನು || 317 ||
ಎಂತು ಗೆಲುವಹುದು ನಮಗೆ | ವೈರಿಗಳ |
ಹಂತ ತಗ್ಗಿಸುವ ಬಗೆಗೆ ||
ಅಂತರಿಸದುಸಿರಿ ಮಾತ | ಎನೆ ಕೇಳಿ |
ಸಂತಸದಿ ದೈತ್ಯವ್ರಾತ || 318 ||

**ಭೈರವಿ - ಅಷ್ಟ**
ಸುರರ ಶಕ್ತಿಯ ಮೂಲವ | ಅರಿತಿಹೆ ನಾನು |
ಪರಿಪರಿ ಮುನಿ ವರ್ಗವ ||
ಮರುಳರಂದದಿ ನಿತ್ಯ ಯಾಗವ ಗೈವುತ |
ಎರೆವರು ಹವಿರ್ಭಾಗವ || 319 ||
ಧರಣಿಯಾಳುವ ರಾಜರು | ತಾವಿದಕೆಲ್ಲ |
ಸರಿಸರಿ ಪೂರಕರು ||
ತುರುಗಳ ಪಾಲಿಸುತರುಪಿಸಿ ಹವಿಗಳ |
ಸುರರೇಳ್ಗೆ ಬಯಸಿರ್ಪರು || 320 ||
ಅರಸರ ಹಿಂಸಿಸುತ | ಗೋವ್ಗಳನೆಲ್ಲ |
ಇರದೆ ಸ್ವಾಧೀನಗೊಳುತ ||
ಮೆರೆದರೆ ನಾವೆಲ್ಲ | ಸರಿವುದು ಹಿಂದಕೆ |
ಸುರತತಿ ತಾ ಸೋಲುತ || 321 ||

**ಕೇದಾರಗೌಳ - ಝಂಪೆ**
ಭಳಿರೆ ನೀವೆಂದ ಮಾತು | ಬಲು ಹರುಷ |
ದೊಳಗೆನ್ನ ಮನಕೆ ಬಂತು ||
ಘಳಿಲನೈದುತ ತುರುಗಳ | ಅಪಹರಿಪೆ |
ಕೊಳುಗುಳದಿ ಕೀರ್ತಿ ಧವಳ || 322 ||

**ಮಾರವಿ - ಏಕ**
ಉತ್ತಮ ಲಾಲಿಸು ಆಜ್ಞೆಯನಿತ್ತರೆ |
ಪೃಥ್ವಿಪರನು ಬಡಿದು ||
ಕತ್ತಲವೈರಿಯ ಸುತನೆಡೆ ಕಳುಹಿಸಿ |
ಉತ್ತರಿಸುವೆನಿದಕೊ || 323 ||
ಕೊಡಿಸೆನಗಪ್ಪಣೆ ಬೆಡಗಿಲಿ ನುಡಿಯದೆ |
ದೃಢದಲಿ ವೈರಿಗಳ ||
ಪೊಡವಿಯ ಕಸಿವುತ | ಮಿಡುಕದ ತೆರದಲಿ |
ಗೊಡವೆಯ ಮುಗಿಸುವೆನು || 324 ||

**ಭೈರವಿ - ತ್ರಿವುಡೆ**
ಪೊರಟನಾಗ | ವಿಭವದಿ | ಪೊರಟನಾಗ || ಪ ||
ತುರಗ ರಥ ಕಾಲಾಳು ಗಜಗಳ |
ವೆರೆಸಿ ದನುಜರ ಪಡೆಯ ಸೇರಿಸಿ || ಅ.ಪ. ||
ಹಾಲನೆರೆದರು ವಿಷವ ಕಕ್ಕುವ |
ಕಾಳ ಸರ್ಪದ ಪೆಸರ ಪೊಂದಿದ |
ಖೂಳ ದನುಜನು ರೋಷದಿಂದಲಿ |
ಶೂಲಪಾಣಿಯ ಪೂರ್ಣ ಕರುಣೆಯ |
ತಾಳಿಹೆನು ತಾನೆಂಬ ಭಾವದಿ |
ಆಳುತನವುರೆಯಂತಕನ ತೆರ |
ಮೇಳವಿಸುತಿರೆ ದಟ್ಟ ದೇಹದ |
ಹಾಳು ಪರಹಿಂಸಾ ವಿನೋದಿಯು || 325 ||

**ಆರ್ಯಸವಾಯಿ - ಏಕ**
ಆಣ್ಣಾನ ದನಗಳನೆಬ್ಬುತ ಬಂದರು |
ಎಣ್ಣುತಲಾ ಸುಖ ಕಷ್ಟಗಳ ||
ತಣ್ಣನೆ ಜೀವಿಸಲೊಂದುಜ್ಜುಗವದು |
ಅನ್ನದ ಋಣವನು ತೀರಿಸಲು || 326 ||

**ಕಂದ**
ನಿಲ್ಗಡೆಯಿಲ್ಲದೆ ಹರುಷದಿ |
ಹುಲ್ಗಾವಲಿನಲ್ಲಿ ದನಂಗಳನು ಮೆಯ್ಸುತಿರೇ ||
ಪಲ್ಗಡಿಯುತ ಫಣಿ ಸೇನೆಯ |
ಮೇಲ್ಗಡೆ ಹಾಯಿಸುತ ಪಶುಗಳನು ಪಿಡಿಯಲ್ಕೆ || 327 ||

**ಪುನ್ನಾಗತೋಡಿ - ಏಕ**
ಕಣ್ಣಬಿಟ್ಟು ಬೆದರಿಸುತ್ತಾ |
ಸಣ್ಣ ಕೆಲಸಾ ದನಗಾಳ ಹಿಡಿತಿ ||
ಬಣ್ಣವೇರ್ನಲಾ ಗಣ್ಯವಲಾ್ಲ |
ರಣ್ಯದಾಗ್ಣ ಹುಲಿಯು ಹಿಡಿತೈತೆ || 328 ||

**ಕೇದಾರಗೌಳ - ಅಷ್ಟ (ಮಾರವಿ - ಏಕ)**
ಬಿಡಿಬಿಡಿ ದನಗಳ ಕಡಿವೆವು ತಲೆಯನು |
ನಡೆಯದು ನಿಮ್ಮಾಟ ||
ಕಡುಗಲಿ ಫಣಿಯಸುರಾಧಿಪ ಬಂದಿಹ |
ಕೊಡುವನು ತಿರುಗೇಟು || 329 ||

**ಪುನ್ನಾಗತೋಡಿ - ಏಕ**
ಜಂಭದಿಂದ್ಯಾಕಿಂತೆಂಬಿರಿ |
ಸಂಬಳ ಕೊಡುವಾತ ನಿಮ್ಮೀ |
ತುಂಬಾ ಕೊಬ್ಬನಿಳಿಸಿ ತಲೆ |
ಗೊಂಬನದಕೆ ತಿಳಿದು ನಡಿರಯ್ಯ || 330 ||

**ಕಂದ**
ಸೇವಕರವರೋಳ್ ಹಳಚಲ್ |
ಕಾವನಿಗರುಹಿರೆನುತಾಗ ಕಳುಹಲ್ಕವರಂ ||
ಸಾವರಿಸುತವರು ಬೇಗಂ |
ಭೂವಲಯವ ಪಾಲಿಪಂಗುಸುರ್ದರು ಭಯದಿಂ || 331 ||

**ಮುಖಾರಿ - ಏಕ**
ಸ್ವಾಮಿಯೆ ಶರಣೆಂಬೆವು ವೊಡಿಯ | ಕೇಳೆಮ್ಮಯ ನುಡಿಯ |
ಸ್ವಾಮಿಯೇ ಶರಣೆಂಬೆವು ವೊಡಿಯ || ಪ ||
ತೋಮನ ಜತೆಗೀ ಧೂಮನ ಸೇರಿಸಿ |
ನೇಮವ ಹೊದ್ದುತ ಗೋಗಳ ಕಾಯ್ವೆವು |
ಕಾಮಿತ ಕೊಡುತಿಹ ದಣಿಯರು ನೀವಿರೆ |
ಸೀಮೆಯೊಳೀ ಪರಿ ಕಷ್ಟವ ಕಾಣೆವು || 332 ||
ಪಾತಾಳಕ್ಕಧಿಪತಿಯಂತೆ ತಾನು | ಫಣಿಯೆಂಬಸುರ |
ಓತು ಗೋವುಗಳನು ಪಿಡಿದಿಹನು ||
ಭೂತಳ ವ್ಯಾಪಿಸಿ ಗಜರಥ ತುರಗ ಪ |
ದಾತಿಯ ಕೂಡುತ ಬಿರುಸಿಲವರು ಬರೆ |
ಕಾತರಗೊಳುತಲಿ ನಾವದ ತಡೆದರೆ |
ಮಾತನು ಕೇಳದೆ ಹಿಂಸಿಸುವಾತನು || 333 ||

**ಸೌರಾಷ್ಟ್ರ - ತ್ರಿವುಡೆ**
ಆಳುಗಳ ನುಡಿ ಕೇಳಿ ಧರಣಿಪ |
ಕಾಲನಂದದಿ ಕೆರಳಿ ನುಡಿದನು |
ಖೂಳ ದನುಜರ ನಾಶ ಗೈಯದಿ | ರಾಳುತನಕೆ || 334 ||
ಮಸಿಯು ಬಪ್ಪುದು ಬಿಡಲು ನರಕದ |
ದೆಸೆಯು ತಪ್ಪದು ಪರರ ಕೇಡಿಂ |
ದಸಮ ತೋಷವ ಹೊಂದುವಾತನ | ಬಸಿರ ಬಗಿವೆ || 335 ||
ಸೊಗಸಿನುಪವನ ಹಾಳುಗೈವುದು |
ಮಿಗೆ ತುರುಗಳನು ಸೆರೆಯ ಪಿಡಿವುದು |
ಸಿಗುವ ಪ್ರಜೆಗಳ ಹಿಂಸಿಪುದು ಕಾ | ಳಗಕೆ ಕರೆಯು || 336 ||
ದಿಟ್ಟ ತನದಲಿಯುತ್ತರಿಪೆನಿದ |
ಕಟ್ಟಿಕೊಳ್ಳಲಿ ಗಂಟ ಸೆರಗಲಿ |
ಜಟ್ಟಿ ಸೇನೆಯು ಧುರಕೆ ಪೊರಡಲಿ | ಥಟ್ಟನಿರದೆ || 337 ||

**ವಾರ್ಧಕ ಅರ್ಧ**
ಮನದಿ ರೌದ್ರಾವೇಶದಿಂದೈಳ ಭೂಪತಿಯು |
ತನುಮರೆದು ಯುದ್ಧ ಸನ್ನಹವೆಸಗಿ ಪೊರಡೆ ಕಂ |
ಡನುವರಿತು ಸೇನಾನಿ ವಿಶ್ವಲೆಯು ತಾನೈತರುತ ವಿನಯದೊಳೆರಗಿದಳು || 338 ||

**ಮುಖಾರಿ - ಆದಿ**
ಲಾಲಿಸೆನ್ನೊಡೆಯ ಐಳ ಭೂಪ | ಬಲು ಕೀರ್ತಿಕಲಾಪ |
ಲಾಲಿಸೆನ್ನೊಡೆಯ ಐಳ ಭೂಪ || ಪ ||
ರಣಕೆ ಪೊರಡುವೆನೀಗ ನಾನು | ದಯಪಾಲಿಸು ವೀಳ್ಯ |
ಚಣದಲ್ಲಿ ದುಷ್ಟ ದೈತ್ಯರನು ||
ಘನತರದಸ್ತ್ರದಿ | ಸೆಣಸುತಲವರನು ||
ಮಣಿಸುತ ಕೊಂದೀ | ದಿನದಿ ಬಹೆನಿದೋ || 339 ||
ಶಕ್ತಿಯಾವುದ ಗಳಿಸಿರಲಿ | ಆಸುರಿ ಗುಣದಲಿ |
ಯುಕ್ತಿಯಾವುದ ಬಳಸಿರಲಿ ||
ಸತ್ಯದ ವೃತ್ತಿಗೆ | ಕುತ್ತನು ತಂದಿಹ ||
ದೈತ್ಯರ ಕೆಡಹುತ | ಮುಕ್ತಿಯ ಕೊಟ್ಟಪೆ || 340 ||

**ಮಧುಮಾಧವಿ - ತ್ರಿವುಡೆ**
ಬದುಕಿಗಾಸರೆಯಿಲ್ಲದಲೆವೀ |
ಸುದತಿಯೆಂದೆಣಿಸದೆಯೆ ಸೈನ್ಯದಿ |
ವಿಧಿಸಿ ವೃತ್ತಿಯ ಎನ್ನ ಪೊರೆದಿಹೆ |
ಇದಕೊ ತನುಮನ ನಾಡಿಗೆ || 341 ||

**ಘಂಟಾರವ - ಮಟ್ಟೆ**
ಕಷ್ಟಕಾಲದಿ | ಎನ್ನ ಪೊರೆದಿಹೆ ||
ಇಷ್ಟದಿಂದಲೆ | ರಣಕೆ ಪೋಪೆನು || 342 ||
ಋಣವು ತೀರಲಿ | ರಣದಿ ಕಾದುವೆ ||
ಗುಣಧಿ ಚಂದಿರ | ಹರಸಿ ಕಳುಹಿಸು || 343 ||
ಧರ್ಮಯುದ್ಧದಿ | ಗೆಲುವು ನಮ್ಮದು ||
ಮರ್ಮ ತಿಳಿದಿಹೆ | ಚಿಂತೆಯೇತಕೆ || 344 ||

**ಭಾಮಿನಿ**
ಎಂದ ಮಾತನು ಕೇಳಿ ಭೂವರ |
ನಂದು ವೀಳ್ಯವನಿತ್ತು ನುಡಿದನು |
ಇಂದಿರಾಧವ ಪೂರ್ಣಕರುಣದಿ ನಿನ್ನ ರಕ್ಷಿಸಲಿ ||
ಚೆಂದದಿಂದನುಮತಿಯಗೊಂಡಾ |
ಮಂದಗಮನೆಯು ತೆರಳುತಿರಲದು |
ಅಂಧಕನ ಕೊಲಲಿಂದುಧರ ಪೊರಟಂದದೊಳಗಾಗ || 345 ||

**ವರಾಳಿ - ಏಕ**
ವೀರನಾರಿ ಕಸೆಯನುಟ್ಟು | ಒಡೆಯ ನೋಡು | ಮೇಲೆ |
ಭಾರಿ ಭಾರಿ ಕೈದುಗಳನು | ಒಡೆಯ ನೋಡು ||
ಧಾರಣೆಯ ಗೈದಳೀಕೆ | ಒಡೆಯ ನೋಡು | ನೋಡೆ |
ಹೋರೆ ಬರುವ ಸಚನೆಯನು | ಒಡೆಯ ನೋಡು || 346 ||
ಸೂರ್ಯನಂತೆ ಪ್ರಭೆಯೋಳೀಕೆ | ಬಂದಳಯ್ಯ | ಇಷ್ಟು |
ಧೈರ್ಯವಿಹುದೆ ಸ್ತ್ರೀಯರಿಂಗೆ | ನೋಡು ರಾಯ ||
ಶೌರ್ಯದೋರ್ವ ಕಾಲವೆನಗೆ | ಬಂದುದಯ್ಯ | ಎನ್ನ |
ಕಾರ್ಯ ನೋಡು ಸಮರಾಂಗಣದಿ | ದೈತ್ಯರಾಯ || 347 ||

**ಕಾಪಿ - ಅಷ್ಟ**
ಸರಿನೇರ ಹೋರಾಟ ಸಲ್ಲ | ಗುಟ್ಟಿ |
ನಿರವ ನಾ ಪೇಳ್ವೆನು ಮೋಸ ತಪ್ಪಲ್ಲ ||
ಅರಿಯದಂತರಮನೆಗೈದು | ಅಲ್ಲಿ |
ಅರಸನ ವಂಚಿಸಿ ಕೈಸೆರೆ ಪಿಡಿದು || 348 ||
ಲಲನೆಯೋಳ್ ಧುರಗೈವೆ ನಾನು | ನೋಳ್ಪ |
ಮಲೆತಾಕೆಯಾಹವದಮಿತ ಶಕ್ತಿಯನು ||
ಸುಲಭದಿ ಗೆಲುವುದೇ ಸಿದ್ಧ | ಜಯ |
ಲಲನೆಯ ವರಿಸುವೆ ನಾನಿದು ಬದ್ಧ || 349 ||

**ಭೈರವಿ - ಏಕ**
ಒಡೆಯನೊಳಪ್ಪಣೆ ಪಡೆದು | ಆ |
ದಡಿಗರು ಗುಪ್ತದಿ ಜಡಿದು ||
ನಡೆತರೆ ತಿಳಿಯುತಲವರ | ನೃಪ |
ನುಡಿಸಿದ ಬಂದಿಹ ವಿವರ || 350 ||
ಮೋಸದಿ ಬಂದಿರೆ ಧುರಕೆ | ಛೀ |
ನಾಶವ ಹೊಂದ್ವಿರಿ ಜೋಕೆ ||
ಪಾಶದಿ ಬಿಗಿಸುವೆನೀಗ | ಜಯ |
ದಾಸೆಯ ತೊರೆಯಿರಿ ಬೇಗ || 351 ||

**ಶಂಕರಾಭರಣ - ಮಟ್ಟೆ**
ಎಲವೊ ಜನಪ ನೋಡ್ದೆಯೇನು ಎಮ್ಮ ಸಹಸವ |
ಸೆಳೆದುಕೊಂಬೆವೀಗ ಛಲದಿ ನಿನ್ನ ರಾಜ್ಯವ ||
ಮಲೆಯ ಬೇಡ ಶರಣು ಬಂದು ಧುರವ ನಿಲ್ಲಿಸು |
ತಲೆಯನುಳುಹಿಕೊಳ್ಳಲಿಷ್ಟು ಧನವ ಸಲ್ಲಿಸು || 352 ||

**ಮಾರವಿ - ಏಕ**
ಹುಲು ರಕ್ಕಸ ನೀ ಮುಚ್ಚೆಲೊ ಬಾಯನು |
ಹಲ ಮಾತಿಂದೇನು ||
ಕುಲವರುಹುವ ನಾಲಿಗೆ ಹೊಂದಿಹೆ ಯಮ |
ನಿಲಯಕೆ ಕಳುಹುವೆನು || 353 ||
ಅಂತಕನೂರನು ತೋರುವ ಸಾಹಸ |
ವಂತನು ನೀನಿಹೆಯಾ ||
ಚಿಂತಿಸಬೇಡವೊ ಯಮಪಥ ಕಲಹಕೆ |
ನಿಂತರೆ ತಿಳಿಯುವುದು || 354 ||

**ಭಾಮಿನಿ**
ಭಳಿರೆ ಬಡನೃಪ ಕೆರೆಯ ಮತ್ಸ್ಯವು |
ಬಲೆಗೆ ಸಿಲುಕಿದೆ ಬಿಡಿಸೆ ಬರುವರ |
ಛಲವ ನೋಳ್ಪೆವು ಕೈತಡೆವರಾರೆನುತಲಬ್ಬರಿಸಿ ||
ಘಳಿನರಸನ ಕರವ ಕಟ್ಟುತ |
ಎಳೆದು ತರುತಿರೆ ಇರಲಿಕಿತ್ತಲು |
ಲಲನೆಯನು ಕಂಡಸುರ ಮನ್ಮಥನಲಗಿನಸ್ತ್ರಕ್ಕೆ || 355 ||
ತನುವನೊಡ್ಡುತ ಹಲವ ಯೋಚಿಸಿ |
ಮನದ ಕನಸಿನೊಳಗೆ ವಿಹರಿಸುತ |
ವನಜನೇತ್ರೆಯ ನುಡಿಸಿದನು ಮೃದು ಮಧುರ ವಚನದಲಿ || ಅರ್ಥ || 356 ||

**ಜಂಜೂಟಿ - ರೂಪಕ**
ಕದನಕಿಂತು ಮಲೆತ ತುಂಬಿದೆದೆಯ ಕೋಮಲೆ |
ಪದುಮನಯನೆ ಚಂದ್ರವದನೆ ನಾಮವೇನೆಲೆ ||
ಬದಿಗೆಯೆಸೆಯೆ ಕೈದುಗಳನು ಮದುವೆಯಾಗುವೆ |
ಮದನವೈರಿಯಾಣೆ ನಿನಗೆ ಮುದವ ನೀಡುವೆ || 357 ||

**ವಸಂತತೋಡಿ - ಆದಿ**
ಎಂಥ ದೈರ್ಯವೊ ನಿನಗೆ | ದೇಹದ ಕೊಬ್ಬು |
ಇಂತು ನುಡಿಸಿತೊ ಹೇಗೆ ||
ಪಂಥದಿ ಗೆಲುವಹ ಸೊಕ್ಕಿದು ನಡೆಯದು |
ನಿಂತರೆದೋರುವೆನಂತಕನರಮನೆಯತ್ತ | _ಈ |
ಹೊತ್ತ || _ನಡೆ | ಯತ್ತ_ಬದುಕಿಕೊ | ಮತ್ತ || 358 ||
ದನಗಳ ಹಿಡಿಯುವುದು | ಮೇಲೆಮ್ಮೆಯ |
ಜನಗಳ ಬಡಿಯುವುದು ||
ಘನತೆಯ ಕಾರ್ಯವೆ ವೈರವು ಯಾತಕೆ |
ರಣವನು ನೀಗುತ ಗೋವ್ಗಳನೆಲ್ಲವ | ನೀಡ_
ಓ | ಮೂಢ_ಧುರ | ಬೇಡ_ಜೀವಿಸಿಕೊ | ಗಾಢ || 359 ||

**ಮಟ್ಟೆತಾಳ**
ಅಹಹ ನಿನ್ನ ನೀತಿ ಮಾತು |
ಮಹಿಯಮೀರ್ದ ಮಲ್ಲನಲ್ಲಿ |
ಕುಹರಕೊದಗು ಜಾಣತನದಿ | ಅಹಿತ ಬಯಸದೆ || 360 ||

**ಭೈರವಿ - ಏಕ**
ಸಲೆ ಪಂಥದ ನುಡಿ ಕೇಳು | ನೀ |
ನೆಲೆಯನು ಹುಡುಕಿಕೊ ಏಳೂ ||
ಕಲಹದಿ ನಿನ್ನಯ ಮದವ | ಬಿಡ |
ದಿಳಿಸುತ ಕಡಿವೆನು ಶಿರವ || 361 ||

**ಕೇದಾರಗೌಳ - ಝಂಪೆ**
ತೊಟ್ಟಿಹೆನೆ ಬಳೆಯ ಕರದಿ | ಸೀರೆಯನು |
ಉಟ್ಟಿಹೆನೆ ನಿನ್ನ ತೆರದಿ ||
ಬೆಟ್ಟದೊಡೆಯನು ನೋಡಲಿ | ಯಮನಗರ |
ಕಟ್ಟುವುದ ಕೊಂಡಾಡಲಿ || 362 ||

**ಮಾರವಿ - ಏಕ**
ವನಿತೆಯ ಕೈಚಳಕವ ಕಾಣುತ ಫಣಿ |
ದನುಜನು ತಾ ಹೆದರಿ ||
ರಣ ಬಿಟ್ಟೋಡಲ್ಕೆಳಿದನು ಪಶ್ಚಿಮ |
ವನಧಿಯ ಕುಮುದಾರಿ || 363 ||
ನಿಜಪುರಿಗಭಿಮುಖವಾದಳು ವರ ಭೂ |
ಭುಜರೊಳು ಹಿರಿಯನಿಗೆ ||
ವಿಜಯದ ಸಂತಸವರುಹುವ ತುಡಿತದಿ |
ಗಜಗಮನೆಯು ಬೇಗ || 364 ||

ಆ ಕ್ಷಿತಿ ಪಾಲನ ಕಟ್ಟುತಲೆಳೆತಹ |
ರಾಕ್ಷಸ ಸೇವಕರ ||
ವೀಕ್ಷಿಸಿ ತಡೆದಳು ಭೂಪನ ರಕ್ಷಣೆ |
ದೀಕ್ಷೆಯ ಹೊಣೆಯೊಳಗೆ || 365 ||
ಅಧಮರೆ ನಿಲ್ಲಿರಿ ಸಾಹಸ ನೋಡುವೆ |
ಕದನದ ರೀತಿಯನು ||
ಸದನವ ಹೊಕ್ಕಿಹ ಕ್ರಮವನು ಮೆಚ್ಚನು |
ಮದನಾರಿಯು ತಾನು || 366 ||

**ಕೇದಾರಗೌಳ - ಝಂಪೆ**
ಮುಕ್ಕಣ್ಣ ಮೆಚ್ಚುವಂತೆ | ಜನಪನನು |
ಲೆಕ್ಕಿಸದೆ ಗೆಲ್ವ ಮುಂತೆ ||
ಸೊಕ್ಕಿದಾ ಮಾತುಗಳನು | ಆಡೆ ಕರ |
ವಿಕ್ಕುತೆಳೆದೊಯ್ಯದಿರೆನು || 367 ||

**ವಚನ**
ಘನತರ ಸಮರ ಸಂಘಟಿಸೆ, ಹಿಂದಿನಿಂದೈತಂದ ಮಾಯಾವಿ ಫಣಿದನುಜನು ವಿಶ್ವಲೆಯ ಎರಡೂ ಕಾಲ್ಗಳನ್ನು ಕತ್ತರಿಸಿ ಹಂಗಿಸುವ ಪರಿಯನೊರೆವೆ

**ಆರ್ಯಸವಾಯಿ - ಏಕ**
ಎಲೆಎಲೆ ವನಿತೆಯೆ ಬಲುಮೆಯ ನುಡಿಗಳ |
ಗಳುಹುವುದಿಂದಿಗದೇನಾಯ್ತು ||
ಛಲಗಳ ಕೆಣಕಿದೆ | ನಿಲದಲೆ ಕಾಲ್ಗಳ |
ಬಲದೊಳಗೀಗಲೆ ಕಡಿದಾಯ್ತು || 368 ||
ರಾಜನನೊಯ್ವೆ ವಿ | ರಾಜಿಪ ನಗರಕೆ |
ಸಾಜದಿ ತಡೆಯುವ ಭಟರಿಹರೆ ||
ರಾಜೀವಾಂಬಕಿ | ಓಜೆಯ ಹ್ರಾಸಕೆ |
ಕೂಜಿತವಿದು ಬಲು ವಿಫಲವುರೆ || 369 ||

**ದ್ವಿಪದಿ**
ದುರುಳನೀ ಪರಿಯಾಗಿ ಹಂಗಿಸುತ ತೆರಳೆ |
ಧರಣಿಪನ್ನೆಳೆದೊಯ್ಯೆ ವೀಕ್ಷಿಸಿದ ತರಳೆ || 370 ||
ಮಾಂಸ ರಕ್ತದಿ ಹರಿವ ಹೊಳೆಯೊಳಾಗುರುಳೆ |
ಹಿಂಸೆಯನುಭವಿಸುವಳು ಅಂಗನೆಯು ಹೊರಳಿ || 371 ||
ನೋವಿನೊಳು ಅಳುವ ಪರಿ ಒರೆಯಲೇನದರ |
ಆ ವನಿತೆ ಬವಣೆಯೊಳಗಿರುವಂಥ ವಿವರ || 372 ||

**ನೀಲಾಂಬರಿ - ರೂಪಕ**
ಶಿವಶಿವ ನಾ ಮೈ ಮರೆತಿರೆ |
ಸವರಿದನೆನ್ನಯ ಕಾಲ್ಗಳ |
ತವಕದೊಳಾ ದುರುಳನು ಕೈ | ತವದಲಿ ತಾನಿಂದು || 373 ||
ಸುತ್ತುತಲಿದೆ ಶಿರ ಕಂಗಳೆ |
ಗತ್ತಲೆಯಾವರಿಸಲು ಬಲ |
ವತ್ತರ ನೋವಿದು ಚರಣಕೆ | ಚಿತ್ತದಿ ಭ್ರಮೆಗೊಂಡೆ || 374 ||
ನಿತ್ಯದಿ ಸಲಹಿದ ದೊರೆಯನು |
ಮಿಥ್ಯದಿ ಕಟ್ಟೊಯ್ಯುತಲಿರೆ |
ವ್ಯರ್ಥದೊಳೀಕ್ಷಿಸುತಿಹೆ ನಾ | ಸತ್ಯಕೆ ಜಯವಿಲ್ಲ || 375 ||
ಯಾರಿಗೆ ಪೇಳುವುದಿದ ಪರಿ |
ಹಾರವ ಗೈವರಗಾಣೆನು |
ಕಾರಡವಿಯ ರೋದನವಿದು | ತೋರೆಲೊ ಪಥ ದೇವ || 376 ||

**ಕಂದ**
ಎಂದೀ ಪರಿಯಿಂ ಚಿಂತಿಸ |
ಲಂದಾಶ್ರಮದೊಳು ಅಗಸ್ತ್ಯಮುನಿಯರಿತನುವಂ ||
ಬಂದನು ಬೇಗದಿ ಸಂಕಟ |
ದಿಂದಿಹಳೆಲ್ಲಿಗೆ ವಿಚಾರ ತಿಳಿವ ತವಕದಿಂ || 377 ||

**ಘಂಟಾರವ - ಅಷ್ಟ**
ಮುಗ್ಧ ವಿಶ್ವಲೆ ಯುದ್ಧದ ಕಣದಲ್ಲಿ |
ಕುದ್ಧಳಾದರೆ ನಿನ್ನೆದುರಿನಿಂ |
ಗೆದ್ದೆನೆಂಬರ ಕಾಣೆನು || 378 ||
ನಾರೀ ನಿನ್ನಯ ಜೀವಿತಕೀಪರಿ |
ಕ್ರೂರ ಕೃತ್ಯವ ಗೈದ ದುರುಳರ |
ದಾರು ವಿವರವ ಪೇಳೆನೆ || 379 ||

**ವರಾಳಿ - ಏಕ**
ಪೇಳಲೇನನಯ್ಯೋ ಮುನಿಯೆ | ಕೇಳಿ ನೀವು | ನಾ |
ಬಾಳ ಕಷ್ಟಗಳಲಿ ನೊಂದೆ | ಕೇಳಿ ನೀವು ||
ಗೋಳಹೊಯ್ದ ದುರುಳನಿಂದು | ಕೇಳಿ ನೀವು | ಪಾ |
ತಾಳದಧಿಪ ಫಣಿಯು ಬಂದು | ಕೇಳಿ ನೀವು || 380 ||
ಗೋವುಗಳನು ಸೆರೆಯ ಹಿಡಿದು | ಕಾಡುದೈತ್ಯ | ಅದರ |
ಸೋವ ತಿಳಿದು ಧುರಕೆ ಪೋದೆ | ನಿದುವೆ ಸತ್ಯ ||
ಆ ವಿಧಾನ ಪೇಳಲೆಂತು | ಘೋರಕೃತ್ಯ | ಮೋಸ |
ಭಾವದಿಂ ದೊರೆಯ ಬಂಧಿಸಿದ | ನವನ ಭೃತ್ಯ || 381 ||
ಬಿಡಿಸಲೆಂದು ಛಲದಿ ಪೋದೆ | ಗುರುವರೇಣ್ಯ | ದುರುಳ |
ದಡಿಗ ತಿಳಿಯದಂತೆ ಬಂದು | ಗುರುವರೇಣ್ಯ ||
ಕಡಿದನೆನ್ನ ಕಾಲ್ಗಳನ್ನು | ಗುರುವರೇಣ್ಯ | ನಮ್ಮ |
ಪೊಡವಿಪತಿಯನೊಯ್ದನೆಳೆದು | ಗುರುವರೇಣ್ಯ || 382 ||
ಪರಿಹರವಿದಕಿಲ್ಲವೇನು | ಗುರುವರೇಣ್ಯ | ದೊರೆಯ |
ಸೆರೆಯನೀಗ ಬಿಡಿಸಲ್ಹೇಗೆ | ಗುರುವರೇಣ್ಯ ||
ಚರಣಹೀನೆ ಬದುಕಲೆಂತು | ಗುರುವರೇಣ್ಯ | ವಿಧಿಯು |
ಪರಿಪರಿಯಲಿ ಹೊಂಚಬಹುದೆ | ಗುರುವರೇಣ್ಯ || 383 ||

**ಸಾಂಗತ್ಯ - ರೂಪಕ**
ಶಿಷ್ಟ ಜನರ ತ್ಯಾಗ ದಿಟ್ಟ ಸ್ಥೈರಣೆ ನೆಲೆ |
ಗಟ್ಟಾಗಿಹುದು ಕಾಂಬೀ ಜಗಕೆ ||
ದೌಷ್ಟ್ಯದಿಂ ಗೈವಟ್ಟಹಾಸಕ್ಕೆ ಕೊನೆಯುಂಟು |
ಕಷ್ಟನಷ್ಟಗಳೆಲ್ಲವನ್ನು || 384 ||
ಮಗಳೆ ಸೈರಿಸು ಬೇಗ ದುಗುಡವೆಲ್ಲವ ನೀಗಿ |
ವಿಗಡನ ವಧೆಯಾಗುವಂತೆ ||
ಸೊಗಸಿನೋಳ್ಸುರವೈದ್ಯರ್ತಪ ಗೈದು ಧರ್ಮವ |
ಜಗದಲಿ ಸ್ಥಿರಗೊಳಿಸುವೆನು || 385 ||

**ವಾರ್ಧಕ**
ಸಾಕಲ್ಯ ಧೈರ್ಯವಂ ದುಃಖಿತೆಗೊರೆದ ಮುನಿಪ |
ಆಕೆಯನು ಕಾಯ್ವಂತೆ ಸುಭಟರಂ ನಿಯಮಿಸುತ |
ಏಕಾಂತ ಪರನಾಗಿ ಅಶ್ವಿನೀಕುವರರಂ ನುತಿಸಿದನು ತವಕಿಸುತಲಿ ||
ಶೋಕದೊಳು ತೊಳಲುತಿಹ ಸಜ್ಜನರನುದ್ಧರಿಸಿ |
ಲೋಕವನು ಸುವಿವೇಕ ಸಂಪ್ರೀತಿಯಿಂ ಪೊರೆವ |
ವೈಕರ್ತನರನೊಲಿಸಿಕೊಂಬುದಕೆ ಸುಸ್ಥಳವಿದೆಂದು ನಿಶ್ಚೈಸುತ್ತಲಿ || 386 ||

**ಭಾಮಿನಿ**
ಉರಿಗಳೈದರ ಮಧ್ಯದಲ್ಲಿಯೆ |
ಚರಣವೊಂದರ ಮೇಲೆ ನಿಲ್ಲುತ |
ಭರಿತ ಭಕ್ತಿಯ ಭಾವದಿಂದಲಿ ಸುರಚಿಕಿತ್ಸಕರ ||
ಕುರಿತು ಮುನಿವರ ತಪವ ಗೈಯಲು |
ಸರುವ ಜೀವರ ಹಿತವೆ ಲಕ್ಷ್ಯದ |
ವರವ ಪಾಲಿಪ ದಸ್ರ-ನಾಸತ್ಯರು ಕರುಣೆಯಿಂದ || 387 ||

**ಪಂತುವರಾಳಿ - ಆದಿ**
ಹೊಳೆಹೊಳೆವ ಪ್ರಕಾಶದಲಿ | ಅಶ್ವಿನೇಯರು |
ಇಳಿದರು ಶಾಂತ ತೇಜದಲಿ ||
ನಳನಳಿಸುವ ದ್ಯುತಿ ಬೆಳಕಿನೊಳಾಕ್ಷಣ |
ಇಳೆಯ ಜೀವರೇಳಿಗೆಯುದ್ದೇಶವು |
ನಲಿವಲಿ ಮೂರ್ತೀಭವಿಸಿದ ತರದಲಿ || 388 ||

**ಬಿಲಹರಿ - ಅಷ್ಟ**
ಮೆಚ್ಚಿದೆವೈ ನಾವಗಸ್ತ್ಯ | ನಿನ್ನೀ |
ಅಚ್ಚಳಿಯದ ಶ್ರದ್ಧಾ ಭಕ್ತಿ ಪ್ರಶಸ್ತ ||
ಸಚ್ಚರಿತನೆ ತಪವೇಕೆ | ನೀ |
ನುಚ್ಚರಿಸೈ ದಯಪಾಲಿಪೆವದಕೆ || 389 ||

**ಕಾಬೋಧಿ - ಝಂಪೆ**
ಜಯವಶ್ವಿನೀಸುತರೆ | ಜಯ ಭಾಸ್ಕರಾತ್ಮಜರೆ |
ದಯವಿರಿಸಿರೆಮ್ಮ ಮೇಲ್ ನಿರುತ ||
ಭಯವಿರದೆಮಗೆ ನವಾ | ಶಯವು ಸ್ಫುರಿಸಿ ಬಾಳು |
ವೆಯು ನಡೆವ ತೆರ ಕಾಯಬೇಕು || 389 ||
ಪಾತಾಳದಧಿಪ ಫಣಿ | ಭೂತಳಕೆ ಬರುತಿಂದು |
ಮಾತೆಯಹ ಗೋವ್ಗಳನು ಪಿಡಿದ ||
ಕಾತರಿಸಿ ರಣಕೊದಗೆ | ನೀತಿಯನು ತೊರೆದು ಜನ |
ನಾಥನನು ಬಂಧಿಸಿದನವನು || 390 ||

**ಸಾಂಗತ್ಯ - ರೂಪಕ**
ತಡೆದ ಸೇನಾನಿಯ ಕಾಲ್ಗಳ ಕಡಿದನು |
ದಡಿಗ ದೈತ್ಯನು ವಂಚಿಸುತ್ತ ||
ನಡೆವಂತಾಕೆಯನು ಮಾಡ್ವರೆ ಸತ್ಯ ಧರ್ಮವ |
ದೃಢದಲಿ ಕಾಪಿಟ್ಟಂತಹುದು || 391 ||

**ಸುರುಟಿ - ಏಕ**
ಮುನಿಪನೆ ಕೇಳ್ನೀನು | ತ್ಯಜಿಸೈ |
ಘನ ವ್ಯಸನಂಗಳನು ||
ವನಿತೆಗೆ ಚರಣವ | ಚಣದಲಿ ತೊಡಿಸಲು |
ಅನುವರಕೊದಗುತ | ದನುಜನ ವಧಿಸಲಿ || 392 ||

**ದ್ವಿಪದಿ**
ಇತ್ತನಿತು ಭರವಸೆಯ ಬಂದು ನೋಡಿದರು |
ಕತ್ತರಿಸಿದಾ ಕಾಲುಗಳ ದುಃಸ್ಥಿತಿಯನು || 393 ||

**ನವರೋಜು - ಏಕ**
ಅರೆದರು ತಾವ್ ಅರಿಷಿಣವ | ಮೇಣ್ |
ಬೆರೆಸಿದರೂ ಕಹಿಬೇವ ||
ವಿರಚಿಸುತೌಷಧ ಕೊಳೆಯದ ತೆರದಲಿ |
ವರೆಸಿದರಾಕ್ಷಣ ನಾರಿಯ ಚರಣಕೆ || 394 ||
ತಕ್ಕೋಪಾಯವನೀಗ | ಕೃತ | ಉಕ್ಕಿನ ಕಾಲನು ಬೇಗ ||
ಅಕ್ಕರೆಯಿಂದಲಿ ಜೋಡಿಸಲಾಕ್ಷಣ |
ಬೆಕ್ಕಸ ಬೆರಗಾಗೆಲ್ಲರು ಕಂಡರು || 395 ||

**ಗೌಳ - ಆದಿ**
ಧನ್ಯಳಾದೆನು ನಾನಶ್ವಿನಿಯರ ಕಂಡು |
ಉನ್ನತೋನ್ನತ ವೈದ್ಯ ವೈಭವವುಂಡು || ಪ ||
ಕಳಕೊಂಡು ಕಾಲ್ಗಳ ಉಂಡೆನು ನೋವ್ಗಳ ||
ತಳಮಳ ದೂರಾಯ್ತು ತವ ಕೃಪೆಯಾಯ್ತು || 396 ||

**ಮಧ್ಯಮಾವತಿ - ತ್ರಿವುಡೆ**
ಈಶ್ವರನು ದಯೆದೋರಿದನು ಓ |
ವಿಶ್ಪಲೆಯೆ ಗುಣ ಹೊಂದಿದೆ ||
ಅಶ್ವವೇರುತ ತರಿದು ದನುಜನ |
ವಿಶ್ವಪತಿ ಸೆರೆ ಮೋಚಿಸು || ವಿಶ್ವಸನದಿ || 397 ||

**(ನವರೋಜು - ಏಕ**
ಈಶ್ವರನಾ ಕರುಣೆಯಿದೆ | ಓ |
ವಿಶ್ವಲೆ ನೀ ಸರಿಯಾದೆ ||
ಅಶ್ವವನೇರುತ ವಧಿಸುತ ದನುಜನ |
ವಿಶ್ವಾಸದಿ ನರಪತಿಯನು ಬಿಡಿಸೌ || 398 ಬ || )

**ಸೌರಾಷ್ಟ್ರ - ತ್ರಿವುಡೆ**
ತರಳೆ ವಿಶ್ವಲೆ ಮುನಿಯ ಕಳುಹಿಸಿ |
ಸರುವ ಜನಹಿತವಪ್ಪ ಮಾತನು |
ಬರೆದಿರಿಸಿದಾ ಸುರವರರು ತಾವ್ | ಮರೆಯಹೊಂದೆ || 399 ||

**ಭೈರವಿ - ಅಷ್ಟ**
ನಿಲ್ಲೆಲೋ ಖೂಳಾಧಮ | ಪೃಥ್ವೀಶನ |
ಎಲ್ಲಿಗೊಯ್ಯುವೆಯಮಮ ||
ತಲ್ಲಣಗೊಳುತಿಹೆ ಖಿಲ್ಲನೆ ನಿನ್ನನು |
ಕೊಲ್ಲದೆ ವಿರಮಿಸೆನು || 400 ||
ನಡೆಯದಂದದೊಳು ನಿನ್ನ | ಕಾಲುಗಳನ್ನು |
ಕಡಿದೊಗೆದಿಹೆನು ಮುನ್ನ ||
ಬೆಡಗಿಯೆ ಗರ್ವವ ಬಿಡುಬಿಡು ರಕ್ಷಣೆ |
ಯೊಡಗೊಂಡರೀಯುವೆನು || 401 ||

**ಪಂತುವರಾಳಿ - ಮಟ್ಟೆ**
ಕತ್ತಿಧಾರೆಯಿಂದ ನಿನಗೆ |
ಮೃತ್ಯುಧಾರೆಯೆರವೆ ಬಾರೊ |
ಸತ್ಯವಿರಲು ವಿಜಯವಿಂದು | ಎತ್ತ ಪೋಪುದು ||
ಪೃಥ್ವಿಯಲ್ಲಿ ನಿನ್ನ ತೆರದ |
ಧೂರ್ತರನ್ನು ಕೊಲ್ಲಲೆಂದು |
ಸ್ತುತ್ಯ ಸುರರ ರಕ್ಷೆಯಿಹುದು | ನಿತ್ಯ ಕೇಳೆಲಾ || 402 ||

**ಭೈರವಿ - ಏಕ**
ಅನುಭವಿಸಿಹೆ ನೀ ಮೊದಲೆ | ರಣ |
ಕಣದಲಿ ಛಲ ಬಿಡು ಮರುಳೆ ||
ಹಣೆಯಲಿ ಬರೆದಿಹುದದನು | ಕೂ |
ರ್ಗಣೆಯಿಂದಲಿ ತಿಳಿಸುವೆನು || 403 ||

**ಭಾಮಿನಿ**
ದನುಜನಿನಜನ ಮನೆಗೆ ತೆರಳಲು |
ಅನಿಮಿಷರು ಸುಮವರ್ಷಗರೆದರು |
ವನಿತೆ ಸಹ ಜನಪಾಲನೊಡನಾ ಮುನಿಯು ಪೊರಮಟ್ಟ ||
ಇನಕುಮಾರರ ಕಾಂಬ ತವಕದಿ |
ಸನಿಹ ಬಂದರವರಿರದಿರೆ ವ |
ಕ್ಕಣೆಯನೊಂದನು ಕಂಡು ವಾಚಿಸಿದರು ಸನುಮತದಲಿ || 404 ||
[ನಾರ್ಥಾರ್ಥಂ ನಾಪಿ ಕಾಮಾರ್ಥಂ ಅಥ ಭೂತದಯಾಂಪ್ರತಿ]

**ಮಧ್ಯಮಾವತಿ - ತ್ರಿವುಡೆ**
ಅರ್ಥ ಕಾಮಗಳಾದಿಯಾಮಿಷ |
ಹತ್ತು ಹಲವನು ಮೀರುತ ||
ನಿತ್ಯ ಪ್ರಾಣೀದಯೆಯು ವೈದ್ಯರ |
ವೃತ್ತಿಯಾಗಲಿ ಮಾಜದೆ || ಸತ್ಯ ಜಗದಿ || 405 ||
ಮುನಿಪನೆಂದನು ಪೊಡವಿಪಾಲನೆ |
ವಿನುತ ಬುಧರಿಗೆ ನೊಂದಿಹ ||
ಮನುಜರೇಳ್ಗೆಗೆ ತ್ಯಾಗ ಭಾವದಿ |
ಧನಕನಕಗಳನೆಲ್ಲವ || ದಾನಮಾಡು || 406 ||

**ಭಾಮಿನಿ**
ಶ್ರೇಷ್ಠ ವೇದದ ವೈದ್ಯ ಸೂಕ್ತದಿ |
ಓಷ್ಠ್ಯ ಕತೆಯನು ಯಕ್ಷಗಾನದಿ |
ಇಷ್ಟಿಕಾಪುರ ಮಹಬಲೇಶ್ವರ ಭಟ್ಟ ರಚಿಸಿದೆನು ||
ಬಟ್ಟಲಲ್ಲಿನ ಹಾಲು ನೀರನು |
ಸ್ಪಷ್ಟವಾಗಿಯೆ ಹಂಸವದ ಪಡೆ |
ವಷ್ಟು ಶ್ರದ್ಧೆಯದೋರಿ ಕನ್ನಡ ಜನನಿಯಾತ್ಮಜರೆ || 407 ||

**ಬಿಲಹರಿ - ಏಕ**
ಮಂಗಲ ಗೌರೀತನಯನಿಗೆ | ಜಯ |
ಮಂಗಲ ಶ್ರೀ ರಾಮೇಶ್ವರಗೆ ||
ಮಂಗಲವಶ್ವಿನಿ ಕುವರರ ಸಂಗಡ |
ಶಂಕರ ಭಗವತ್ಪಾದರಿಗೆ ||
ಮಂಗಲಂ ಜಯ | ಮಂಗಲಂ | ಶುಭ ಮಂಗಲಂ || 408 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಗೊತ್ತಿಲ್ಲ

**ಪ್ರಸಂಗ ಪ್ರತಿ ಆಧಾರ:** ಪ್ರಸಂಗಕರ್ತರ ಹಸ್ತಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಇಟಗಿ ಮಹಾಬಲೇಶ್ವರ ಭಟ್ಟ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಇಟಗಿ ಮಹಾಬಲೇಶ್ವರ ಭಟ್ಟ

**ಅಂತರಜಾಲ ಪ್ರತಿ ಬರವಣಿಗೆ:** ಇಟಗಿ ಮಹಾಬಲೇಶ್ವರ ಭಟ್ಟ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ,  ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ